ುಪನ್ಯಾಸ
ಂಥಮಾಲೆ

೧೩೯

ಕುಮಾರವ್ಯಾಸನ ಭಾಗವತ ದೃಷ್ಟಿ

ಅನಂತ ಬುರ್ಲಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ ೧೯೭೨

ಕುಮಾರವ್ಯಾಸನ ಭಾಗವತ ದೃಷ್ಟಿ

ಉಪನ್ಯಾಸ ಗ್ರಂಥಮಾಲೆ
೧೩೯

ಕುಮಾರವ್ಯಾಸನ ಭಾಗವತ ದೃಷ್ಟಿ

ಶ್ರೀಅನಂತ ಬುರ್ಲಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೯೭೨

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: ಮಾರ್ಚ, ೧೯೭೨
೫,೦೦೦ ಪ್ರತಿಗಳು

ಬೆಲೆ: ೨೫ ಪೈಸೆ

ಮುದ್ರಕರು :
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ-೩

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವ ವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೩೮ ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು–ನಾಲ್ಕು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನ-ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ ಈ ಪುಸ್ತಕಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯು ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧-೩-೧೯೭೨

ಎ. ಎಸ್. ಅಡಕೆ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ, ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀಯುತ ಚೆನ್ನವೀರ ಕಣವಿ ಯವರು ಕಳೆದ ಮಾರ್ಚ ತಿಂಗಳು ೩೧ ರಂದು ರಾಮನಗರದಲ್ಲಿ 'ಕುಮಾರವ್ಯಾಸನ ಭಾಗವತದೃಷ್ಟಿ' ಎಂಬ ವಿಷಯವಾಗಿ ಮಾತನಾಡಲು ಅವಕಾಶಮಾಡಿಕೊಟ್ಟರು. ಆ ಸಂದರ್ಭದಲ್ಲಿ ಮಾಡಿದ ಭಾಷಣವನ್ನೇ ವಿಸ್ತರಿಸಿ ಈ ರೂಪದಲ್ಲಿಡಲಾಗಿದೆ. ಕವಿಯ 'ಭಾಗವತ ದೃಷ್ಟಿ'ಯನ್ನು ನಾನು ಕಂಡಂತೆ ರೂಪಿಸಲು ಯತ್ನಿಸದೆ, ಕವಿಯೇ ಅಭಿವ್ಯಕ್ತಗೊಳಿಸಿದ ರೀತಿಯಲ್ಲಿ ನಿರೂಪಿಸಿದ್ದೇನೆಂದು ನನ್ನ ಭಾವನೆ.

ವಿಶ್ವವಿದ್ಯಾಲಯದ 'ಉಪನ್ಯಾಸ ಗ್ರಂಥಮಾಲೆ'ಯಲ್ಲಿ ಇದನ್ನು ಪ್ರಕಟಿಸುವ ಔದಾರ್ಯ ತೋರಿದುದಕ್ಕಾಗಿ ವಿಶ್ವ ವಿದ್ಯಾಲಯದ ಅಧಿಕಾರಿಗಳಿಗೂ ಹಾಗೂ ಪ್ರಕಟನ ವಿಭಾಗದ ಮುಖ್ಯಾಧಿಕಾರಿಗಳಾದ ಶ್ರೀಯುತ ಚೆನ್ನವೀರ ಕಣವಿಯವರಿಗೂ ನಾನು ತುಂಬ ಕೃತಜ್ಞನಾಗಿದ್ದೇನೆ.

ಕವಿ ಕುಮಾರವ್ಯಾಸನ ಭಾಗವತ ದೃಷ್ಟಿಯನ್ನು ಗುರುತಿಸಿ ಅವನ ಕಾವ್ಯ ಸೃಷ್ಟಿಯಲ್ಲಿ ಸುತ್ತಿ ಸುಳಿದಾಗಲೆಲ್ಲ ನನಗೆ ಅಪೂರ್ವ ಶಾಂತಿ, ಸಮಾಧಾನ, ಸಂತೋಷ ಉಂಟಾಗಿದೆ. ಓದುಗರಿಗೂ ಅದೇ ಅನುಭವ ಈ ಕಿರುಹೊತ್ತಗೆಯಿಂದಾದರೆ ನನ್ನ ಪ್ರಯತ್ನ ಸಫಲವೆಂದು ಭಾವಿಸುತ್ತೇನೆ.

ಗದಗ
ವಿಜಯದಶಮಿ, ವಿರೋಧಿಸಂವತ್ಸರ
ಶಕೆ ೧೮೯೩

ಅನಂತ ಬುರ್ಲಿ

ಪರಿವಿಡಿ

೧. ಪೂರ್ವಕವಿಗಳ ಲೌಕಿಕ ದೃಷ್ಟಿ

ಪಂಪ, ರನ್ನ, ಹರಿಹರ, ಕುಮಾರವ್ಯಾಸರು ಕನ್ನಡ ಸಾಹಿತ್ಯದಲ್ಲಿ ಮಹಾಕವಿಗಳೆಂದು ಪ್ರಸಿದ್ಧರಾಗಿದ್ದಾರೆ. ಇವರಲ್ಲಿ ಪಂಪ, ರನ್ನ, ಕುಮಾರವ್ಯಾಸರು 'ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿ'ಯನ್ನು ಈಸಿದವರು. ಮೂವರೂ ವ್ಯಾಸಮಹರ್ಷಿಗಳ ಮಹಾಭಾರತವನ್ನೇ ಮೂಲ ಆಧಾರವಾಗಿಟ್ಟುಕೊಂಡು ಕಾವ್ಯವನ್ನು ರಚಿಸಿದವರು. ಪಂಪನು 'ಕತೆಯು ಮೆಯ್ಗಿಡಲೀಯದೆ'[೧] ಸಮಸ್ತ ಭಾರತವನ್ನು ಅಪೂರ್ವವಾಗಿ ಪೇಳ್ದವನು. ರನ್ನನು ಗದಾಪರ್ವವನ್ನೇ ತನ್ನ ಕಾವ್ಯದ ಮುಖ್ಯ ವಸ್ತುವನ್ನಾಗಿರಿಸಿಕೊಂಡಿದ್ದರೂ ಸಿಂಹಾವಲೋಕನ ಕ್ರಮದಿಂದ[೨] ಇಡೀ ಭಾರತ ಕಥೆಯನ್ನು ಹೇಳಿರು

---

೧ ಕತೆ ಪಿರಿದಾದೊಡಂ ಕತೆಯು ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ........

(ಪಂ. ಭಾ.)

೨ ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲಮಿೂ ಗದಾಯುದ್ಧದೊಳಂ ।
ತೊಳಕೊಂಡತ್ತೆನೆ ಸಿಂಹಾ
ವಳೋಕನ ಕ್ರಮದಿನಱಿಪಿದಂ ಕವಿ ರನ್ನಂ ॥ (ಗ. ಯು.)

ವನು. ಕುಮಾರವ್ಯಾಸನು ಕೂಡ ಕಾವ್ಯರಚನೆಯಲ್ಲಿ ವ್ಯಾಸರನ್ನೇ ಹೆಚ್ಚಾಗಿ ಅನುಸರಿಸಿರುವನು. ಪಂಪನ ದೃಷ್ಟಿ ತನ್ನ ಆಶ್ರಯದಾತನನ್ನು ಕಿರೀಟಿಗೆ ಹೋಲಿಸಿ ಕಥೆಯನ್ನು ಹೇಳುವಲ್ಲಿ. ಆದುದರಿಂದ ಅರ್ಜುನನೇ 'ವಿಕ್ರಮಾರ್ಜುನ ವಿಜಯ'ದ ಕಥಾನಾಯಕನು. ಗುಣದೊಳಗ್ಗಳನಾದ ಅರಿಕೇಸರಿಯ ಒಳ್ಪಿಗೆ ಮನಸೋತು ಕವಿತೆಯೊಳಗ್ಗಳನಾದ ಪಂಪನು 'ಗುಣಾರ್ಣವನೊಳ್ಪು ಮನ್ಮನೋವಿಲಾಸಮನೆಯ್ದೆ ಪೇಳ್ದಪೆಂ'[೧] ಎಂದು ಬಾಯಿಬಿಟ್ಟು ಹೇಳಿದ್ದಾನೆ. 'ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆ ಎನಗೆ ಅೞ್ತಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್' ಎಂದು ತನ್ನ ಹೃದಯವನ್ನೇ ತೆರೆದಿಟ್ಟಿದ್ದಾನೆ. ಮೇಲಾಗಿ 'ಪೇೞ್ವೊಡೆ ಪಂಪನೆ ಪೇೞ್ಗುಂ' ಎಂಬ ಪಂಡಿತರ ಪ್ರಶಂಸೆ ಬೇರೆ. 'ಪ್ರೀತಿಯೆ ಬೞಿಯಟ್ಟೆ ಪಿರಿದನಿತ್ತು ನಿಜಾಭಿಖ್ಯಾತಿಯನು ಇಳೆಯೊಳ್ ನಿರಿಸಲ್ಕೆ' ಅರಿಕೇಸರಿ ಅಪೇಕ್ಷೆಪಟ್ಟನಂತೆ. ಹೀಗೆ ಕವಿಯ ಕಾವ್ಯರಚನೆಗೆ ಲೌಕಿಕ ಪ್ರೇರಣೆ ಮುಖ್ಯವಾಗಿದೆ. ಅಂತೆಯೆ ಪಂಪಕವಿ 'ಬೆಳಗುವೆನಿಲ್ಲಿ ಲೌಕಿಕಮಂ' ಎಂದು ಘಂಟಾಘೋಷವಾಗಿ ಸಾರಿದ್ದಾನೆ ಕೂಡ.

---

೧ ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸುವೆಂ ಕವಿ
ವ್ಯಾಸನೆನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಮನೋ
ವಾಸಮನೆಯ್ದೆ ಪೇಳ್ದಪೆನದಲ್ಲದೆ ಗರ್ವಮೆ ದೋಷಮೞ್ತಿಗಂ
ದೋಷಮೆ ಕಾಣೆನೆನ್ನಱಿವ ಮಾೞ್ಕೆಯೆ ಪೇೞ್ವೆನಿದಾವ
ದೋಷಮೋ ॥ (ಪಂ. ಭಾ.)

ಕವಿ ರನ್ನನು ಕೂಡ ಪಂಪನ ಮಾರ್ಗದಲ್ಲಿಯೇ ಕೃಮಿಸಿದನು. ತನ್ನ ಆಶ್ರಯದಾತನಾದ ಇರಿವ ಬೆಡಂಗನನ್ನು ಭೀಮನಿಗೆ ಹೋಲಿಸಿ[೧] 'ಸಾಹಸಭೀಮ ವಿಜಯ'ವನ್ನು ರಚಿಸಿದನು. 'ಗದಾಯುದ್ಧ'ದಲ್ಲಿ ಭೀಮನೇ ಕಥಾನಾಯಕನು.[೨] ಪಂಪ ರನ್ನ ಇಬ್ಬರೂ ಕವಿಗಳು ಒಂದೊಂದು ಪಾತ್ರದಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿ ಅದಕ್ಕೆ ಉಚಿತವಾದ ರೀತಿಯಲ್ಲಿ ಕಥೆಯನ್ನು, ಸನ್ನಿವೇಶಗಳನ್ನು, ಪಾತ್ರಗಳನ್ನು ಹೊಂದಿಸಿಕೊಂಡಿದ್ದಾರೆ. ಪಂಪಕವಿ ಧರ್ಮದಿಂದ ಜೈನನಾದರೂ ಪರಂಪರೆಯಿಂದ ವೈದಿಕ ಸಂಸ್ಕಾರವು ಅವನ ರಕ್ತದಲ್ಲಿ ಹರಿದುಬಂದಿದೆ. 'ಜಾತಿಯೊಳೆಲ್ಲಮುತ್ತಮದ ಜಾತಿ ವಿಪ್ರಕುಲಂ' ಎಂದು ಅಭಿಮಾನದಿಂದ ಹೇಳಿದ್ದಾನೆ. ಹೀಗಾಗಿ ಜೈನಮತದ ಪ್ರಭಾವ ಅವನ ಮೇಲೆ ಸಾಕಷ್ಟಿದ್ದರೂ ವ್ಯಾಸಭಾರತವನ್ನೇ ಮುಖ್ಯವಾಗಿ ಅನುಸರಿಸಿದ್ದಾನೆ. ರನ್ನಕವಿಗೆ ಪಂಪನ ಈ ವೈದಿಕ ಮತದ ಅಭಿಮಾನವಿಲ್ಲ; ಅಭಿನಿವೇಶವಿಲ್ಲ. ಅಷ್ಟಟೆ ಜೈನ

---

೧ ....ಸತ್ಯಾಶ್ರಯ ದೇ
ವನೆ ಪೃಥ್ವಿವಲ್ಲಭಂ ಕಥಾನಾಯಕ ನಾ।
ಗನಿಲಜನೊಳ್ಪೋಲಿಸಿ ಪೇ
ಳ್ದನೀ ಗದಾಯುದ್ಧಮಂ॥ (ಗ. ಯು.)

೨ ಕೃತಿ ನೆಗಟ್ದ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ (ಗ. ಯು.)

ನಾತನು. ಹೀಗಾಗಿ ಅವರಿಬ್ಬರ ದೃಷ್ಟಿಗಳಲ್ಲಿಯೇ ಅಂತರವನ್ನು ಕಾಣುತ್ತೇವೆ. ಕೃಷ್ಣನ ಪಾತ್ರವನ್ನು ಚಿತ್ರಿಸುವಲ್ಲಿ ಪಂಪನಿಗೆ ಇರುವ ಗೌರವದೃಷ್ಟಿ ರನ್ನನಿಗಿಲ್ಲ. ಪಂಪನಿಗೆ ಕೃಷ್ಣನಲ್ಲಿ ಅವತಾರೀ ಪುರುಷನೆಂಬ ಆದರವಿದೆ. ತಿರಸ್ಕಾರವಂತೂ ಇಲ್ಲವೇ ಇಲ್ಲ. ಅಂತೆಯೆ ಪಂಪನು ದುರ್ಯೋಧನನ ಬಾಯಿಂದ—

ಲೋಕಗುರು ಶಂಖಚಕ್ರ ಗ
ದಾಕರನತಿಶಯು ಚತುರ್ಭುಜಂ ಜನಜನಿತ ।
ವ್ಯಾಕುಳದೆ ಬಂದನೆಂದೊಡೆ
ಲೋಕದೊಳಿನ್ನೆನ್ನ ದೊರೆಗೆ ಪಿರಿಯರುಮೊಳರೇ ॥

ಎಂದು ಹೇಳಿಸಿದ್ದಾನೆ; 'ಕಂಸಾರಿ ಯುಷ್ಮತ್ ಪದಪಾಂಸುಗಳಿಂದಾಂ ಪವಿತ್ರಗಾತ್ರನೆನಾದೆಂ' ಎಂದು ಹೊಗಳಿಸಿದ್ದಾನೆ. ಅಗ್ರಪೂಜೆಯ ಸಂದರ್ಭದಲ್ಲಿ ಭೀಷ್ಮಾಚಾರ್ಯರಿಂದ—

ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ
ತಲದಿಂದೆತ್ತಿದನಾವನೆಂದು ನರಸಿಂಹಾಕಾರದಿಂ ದೈತ್ಯನಂ
ಚಲದಿಂ ಸೀಳ್ದವನಾವನಬ್ಧಿಮಥನ ಪ್ರಾರಂಭದೊಳ್ ಮಂದರಾ
ಚಲಮಂ ತಂದವನಾವನಾತನೆ ವಲಂ ತಕ್ಕಂ ಪಜಿರ್ ತಕ್ಕರೇ ॥

ಎಂದು ನುಡಿಸಿದ್ದಾನೆ. ಕೃಷ್ಣನು ಶ್ರೀ ವಿಷ್ಣುವಿನ ಅವತಾರವೆಂಬುದರ ಸ್ಪಷ್ಟ ಕಲ್ಪನೆ ಪಂಪನಿಗೆ ಇದೆಯೆಂಬುದಕ್ಕೆ ಬೇರೆ ನಿದರ್ಶನವು ಬೇಕಿಲ್ಲ.

ರನ್ನನ ದೃಷ್ಟಿಯಲ್ಲಿ ಕೃಷ್ಣನೊಬ್ಬ ಅತ್ಯಂತ ಲೌಕಿಕ ವ್ಯಕ್ತಿ, ಶ್ವೇತಕೃಷ್ಣಕಾರಕನು, ವಿಷರೂಪನು, ನಿರ್ಗುಣನು. ರನ್ನನ ದುರ್ಯೋಧನನು ಕೃಷ್ಣನನ್ನು ಕಂಡದ್ದು ಹೀಗೆ—

ಅನುಜೆಯುನಿತ್ತು ನರಂಗಾ
ತನ ತನಯಂಗಿತ್ತು ತನ್ನ ಮಗಳಂ ತಾನಾ ।
ತನ ರಥಮುನೆಸಗಿ ಧರ್ಮಜ
ನನುಜನ ನೆವದಿಂದಮುರಸುಗೆಯ್ವಂ ಕೃಷ್ಣಂ ॥

ಪಂಪನ ಕಾವ್ಯದಲ್ಲಿ ಇಂತಹ ಮಾತು ತಪ್ಪಿಯೂ ಕೂಡ ಸುಳಿಯದು. ರಾಜಕೀಯ ಸ್ವಾರ್ಥವನ್ನು ಸಾಧಿಸಲು ಕುಮಂತ್ರವನ್ನು ಹೂಡಿದ ವ್ಯಕ್ತಿ ಕೃಷ್ಣನೆಂಬ ಭಾವನೆ ರನ್ನನಿಗೆ ಬಲವಾಗಿದ್ದಂತೆ ಕಾಣಬರುತ್ತದೆ. ತನ್ನ ಕಾಲದ ರಾಜಕೀಯ ಜೀವನವನ್ನು ಅವಲೋಕಿಸಿ ಕೃಷ್ಣನ ಬಗೆಗೆ ಈ ಅಭಿಪ್ರಾಯಕ್ಕೆ ಬಂದಿರಬೇಕು ! ಕೃಷ್ಣನ ಬಗೆಗೆ ಸದಭಿಪ್ರಾಯವಿರದಿದ್ದರೆ ಹೋಗಲಿ. ರನ್ನನಿಗೆ ದುರಭಿಪ್ರಾಯವುಂಟೆಂಬುದಕ್ಕೆ ಅವನ ಈ ಕೆಳಗಿನ ಪದ್ಯವನ್ನು ನೋಡಬಹುದು—

ಪುರುಷರ್ ಮೂವರೊಳೊರ್ಬನೆಂಬರಸುರ
ಪ್ರಧ್ವಂಸಿಯೆಂಬರ್ ಜಗ
ದ್ಗುರುವೆಂಬರ್ ಪೆಱರ್ಗೇಕೆ ತೇರನೆಸಪಂ
ಧರ್ಮಾನುಜಂಗೇಕೆ ಕಿಂ ।
ಕರನಾದಂ ಕರವೇಱಿಯಾದನದಱಿಂ ಸೂತಂ
ಭಟಂ ಪೇಱಿಯೆಂ
ಬರಮಾತೊಪ್ಪುಗುಮಾದಿ ದೇವನೆನಿಸಲ್
ಕೃಷ್ಣಂಗದೆಂತೊಪ್ಪುಗುಂ ॥

ಪಂಪನು ಬಳಸಿದ ' ಲೋಕಗುರು 'ವೆಂಬ ಮಾತೂ ರನ್ನನಿಗೆ ಒಪ್ಪಿತವಿಲ್ಲವೆಂಬುದು ಇಲ್ಲಿ ಸ್ಪಷ್ಟವಾಗಿದೆ. ಕೃಷ್ಣನನ್ನು ಆದಿ

ದೇವನೆಂದು ಕರೆಯುವದಕ್ಕೆ ರನ್ನನು ವಿರೋಧಿಸುತ್ತಾನೆ. ಕೃಷ್ಣನನ್ನು 'ಸೂತಂಭಟಂ' ಎಂದು ವ್ಯಂಗ್ಯವಾಗಿ ನುಡಿದಿದ್ದಾನೆ.

ಹೀಗೆ ಇಬ್ಬರು ಮಹಾಕವಿಗಳು ಮಹಾಭಾರತದ ಕಥೆಯನ್ನೇ ಬಳಸಿಕೊಂಡು ಲೌಕಿಕ ಕಾವ್ಯಗಳನ್ನು ಬರೆದಿದ್ದರೂ ಪಾತ್ರಗಳನ್ನು ಕಾಣುವಲ್ಲಿ ಅವರ ದೃಷ್ಟಿ ಬೇರೆಬೇರೆಯಾಗಿದೆ. ಅದಕ್ಕೆ ಅವರ ಮಾನಸಿಕ, ಧಾರ್ಮಿಕ ಹಿನ್ನೆಲೆಯೇ ಕಾರಣವಲ್ಲದೆ ಬೇರಿಲ್ಲ.

೨. ಭಾಗವತದೃಷ್ಟಿ

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾವಾಽನುಸೃತ ಸ್ವಭಾವಾತ್ ॥
ಕರೋತಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯೇತ್ತತ್ ॥

—ಭಾಗವತ ಏಕಾದಶಸ್ಕಂದ

ಕಾಯಾ-ವಾಚಾ-ಮನಸಾ-ಬುದ್ಧ್ಯಾ ಮಾಡುವ ಸಕಲ ಕರ್ಮಗಳನ್ನು ಯಾವನು ಪರಮಾತ್ಮನಲ್ಲಿ ಸಮರ್ಪಿಸುವನೋ ಅವನೇ ಪರಮಭಾಗವತನು. ಭಾಗವತನಿಗೆ ಚರಾಚರ ಸೃಷ್ಟಿಯೆಲ್ಲ ಪರಮಾತ್ಮನ ಲೀಲೆ. ಮಣ್ಣಿನ ಕಣಕಣದಲ್ಲಿಯೂ ಭಗವಂತನ ರೂಪವೇ ಅವನಿಗೆ ಕಾಣುತ್ತದೆ. ತೀಡುವ ಗಾಳಿಯಲ್ಲಿ ಪರಮಪುರುಷನ ಉಸಿರು ತಾಕುತ್ತದೆ. ಕೇಳುವ ನಾದವೆಲ್ಲ ಅವನಿಗೆ ಓಂಕಾರ, ಸಾಮಗಾನವು. ಬೆಳಕೆಲ್ಲವೂ ದೇವದೇವನ ಕಾಂತಿಕಿರಣ. ಸೋಂಕಿನಲ್ಲಿ ಪುರುಷೋತ್ತಮನ ಅಮೃತಾಲಿಂಗನದ ಅಮಿತ ಸುಖವು. ಅಣೋರಣೀಯನೂ ಮಹತೋಮಹೀಯನೂ ಆದ ಪರಮಾತ್ಮನ ಸಾನ್ನಿಧ್ಯವನ್ನು ಸರ್ವಭೂತಗಳಲ್ಲಿಯೂ ಕಾಣುತ್ತಾನೆ ಭಾಗವತೋತ್ತಮನು. ಸರ್ವ ಜೀವರಲ್ಲೂ ಸಮಭಾವವನ್ನು ಹೊಂದಿರುತ್ತಾನೆ. ಪರ

ಮಾತ್ಮನ ಸರ್ವವ್ಯಾಪ್ತಿತ್ವ, ಸರ್ವಾಂತರ್ಯಾಮಿತ್ವಗಳು ಭಾಗವತನಿಗೆ ನಿತ್ಯಾನುಭವ. ಭಗವಂತನ ಸರ್ವಪ್ರೇರಕತ್ವದ ಅರಿವು ಅವನಿಗೆ ದಾರಿದೀಪ.

> ಅಹಂ ಸರ್ವಸ್ಯಪ್ರಭವೋಮತ್ತಃ ಸರ್ವಂ ಪ್ರವರ್ತತೇ
> ಇತಿಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥
> ಮಚ್ಚಿತ್ತಾ ಮದ್ಗತ ಪ್ರಾಣಾ ಬೋಧಯಂತಃ ಪರಸ್ಪರಮ್
> ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿಚ ॥
> ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್
> ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಂತಿ ತೇ ॥

—ಭಗವದ್ಗೀತಾ—ಅಧ್ಯಾಯ ೧೦

'ನಾನೇ ಸೃಷ್ಟಿಕಾರಣನು, ಎಲ್ಲವೂ ನನ್ನ ಸಂಕಲ್ಪಾನುಸಾರವಾಗಿಯೇ ನಡೆಯುವದು ಎಂಬುದನ್ನು ತಿಳಿದು ಭಕ್ತಿಪೂರ್ವಕವಾಗಿ ನನ್ನನ್ನು ಭಜಿಸುವವನೇ ಜ್ಞಾನಿಯು. ಮನಪ್ರಾಣಗಳನ್ನು ನನ್ನಲ್ಲಿಟ್ಟು ಶರಣಾಗತನಾದವನು, ಸದಾ ನನ್ನ ಮಹಿಮೆಯನ್ನು ಕುರಿತು ಮಾತನಾಡುತ್ತ ಸಂತೋಷಿಸುವವನು ನಿತ್ಯತೃಪ್ತನಾಗಿ ನನ್ನಲ್ಲಿಯೇ ರಮಿಸುವನು. ಸತತವಾಗಿ ಭಕ್ತಿಪೂರ್ವಕ ನನ್ನನ್ನು ಸ್ಮರಿಸುವವನಿಗೆ ಬುದ್ಧಿಯೋಗವನ್ನು ಕರುಣಿಸುವೆನು. ಆ ಮೂಲಕ ಅವನು ನನ್ನನ್ನು ಹೊಂದುವನು' ಎಂದು ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಇದರಿಂದ ನಿಷ್ಕಾಮಕರ್ಮ, ಸರ್ವಾರ್ಪಣಭಾವ, ಶುದ್ಧ ಭಕ್ತಿಗಳೇ ಭಾಗವತ ಧರ್ಮದ ಮುಖ್ಯ ಲಕ್ಷಣಗಳು

ಎಂಬುದು ಸ್ಪಷ್ಟವಾಗುತ್ತದೆ. ನವವಿಧ ಭಕ್ತಿಗಳಿಂದ ಸದಾ ಸರ್ವದಾ ಪರಮಾತ್ಮನನ್ನು ಭಜಿಸುವದೇ ಅವನಿಗೆ ಬದುಕು.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ ||
ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚ ನವಲಕ್ಷಣಾ ।
—ಭಾಗವತ ಸಪ್ತಮ ಸ್ಕಂದ

ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನಗಳೇ ನವವಿಧ ಭಕ್ತಿಗಳು. ಭಾಗವತನಿಗೆ ಭಗವದಾರಾಧನೆಯನ್ನುಳಿದು ಬೇರೆ ಬದುಕೇ ಇಲ್ಲ.

ಕುಮಾರವ್ಯಾಸ ಕವಿ ಭಾಗವತ ಧರ್ಮವನ್ನು ಮನಸಾರೆ ಮೆಚ್ಚಿದವನು. ಆ ರೀತಿಯಲ್ಲಿ ಬದುಕಿದವನು. ಅವನಿಗೆ ಯಾವ ಲೌಕಿಕದ ಹಂಗೂ ಇಲ್ಲ. ಪಂಪ ರನ್ನರಂತೆ ಯಾವ ಅರಸರ ಆಶ್ರಯದಲ್ಲಿ ನಿಂತು ಕಾವ್ಯ ರಚಿಸಲಿಲ್ಲ. ಯಾವ ಲೌಕಿಕ ವ್ಯಕ್ತಿಯನ್ನು ಮೆಚ್ಚಿಸಲೂ ಕಾವ್ಯವನ್ನು ಬರೆಯಲಿಲ್ಲ. 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ' ಎಂದು ಹೇಳಿಕೊಂಡಿದ್ದಾನೆ. ಕಾವ್ಯಕರ್ತೃ ತಾನಲ್ಲ, ತಾನು ಕೇವಲ ಲಿಪಿಕಾರ ಎಂದು ಹೇಳಿ, ಪರಮಾತ್ಮನೇ ತನ್ನಿಂದ ಕಾವ್ಯವನ್ನು ನುಡಿಸಿದ್ದಾನೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾನೆ. ಹೀಗೆ ಸರ್ವಪ್ರೇರಕನು, ಸರ್ವಕರ್ತೃವು ಪರಮಾತ್ಮನೇ ಎಂಬ ಭಾಗವತದೃಷ್ಟಿಯನ್ನು ಪೀಠಿಕಾಸಂಧಿಯಲ್ಲಿ ಸ್ಪಷ್ಟಗೊಳಿಸಿರುವನು. ಕುಮಾರವ್ಯಾಸನು ಕಾವ್ಯವನ್ನು ಹೇಳಿ

ದುದು ಕೂಡ 'ಕೃಷ್ಣಮೆಚ್ಚಲಿಕೆ'[೧] ಕುಮಾರವ್ಯಾಸನಿಗೆ ಮಹಾಭಾರತವು ಅಣ್ಣ-ತಮ್ಮಂದಿರ ಕಾಳಗದ ಕಥೆಯಲ್ಲ; ಪಂಚಮಶ್ರುತಿ, ಕೃಷ್ಣಕಥೆಯು. 'ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮವಿಚಾರಮಾತ್ರವನು' ಎಂದು ಮೊದಲಲ್ಲಿಯೇ ಎಚ್ಚರಿಸಿದ್ದಾನೆ. ಪಂಪಕವಿಗೆ ಮಹಾಭಾರತವು ದುರ್ಯೋಧನನ ಚಲ, ಇನತನಯನ ನನ್ನಿ, ಭೀಮನ ಗಂಡು, ಮದ್ರೇಶನ ಬಲ, ಸಿಂಧೂದ್ಭವನ ಅತ್ಯುನ್ನತಿ, ಕುಂಭೋದ್ಭವನ ಚಾಪವಿದ್ಯೆ, ಫಲ್ಗುಣನ ಸಾಹಸ, ಧರ್ಮಪುತ್ರನ ಧರ್ಮಗಳ ಮೇಲ್ಮೆಯನ್ನು ಎತ್ತಿಹಿಡಿಯುವ ಲೌಕಿಕಕಾವ್ಯ. ಕುಮಾರವ್ಯಾಸನ ದೃಷ್ಟಿಯಲ್ಲಿ ಈ ಘನಮಹಿಮರೆಲ್ಲ 'ಸೂತ್ರವನಲುಗಿದೊಡೆ ಹಳಚುವ ಹಾಹೆಗಳು' ಈ ಪಾತ್ರಗಳನ್ನೆಲ್ಲ ಆಡಿಸುವ ಸೂತ್ರಧಾರ ಶ್ರೀಕೃಷ್ಣ. ಈ ಪ್ರಜ್ಞೆ ಬರಿ ಕವಿಗಲ್ಲ, ಕನ್ನಡ ಭಾರತದಲ್ಲಿ ಬರುವ ಪ್ರತಿಯೊಂದು ಪ್ರಮುಖಪಾತ್ರಗಳಿಗೂ ಇದೆ.

---

೧ ತಿಳಿಯಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣಮೆಚ್ಚಲಿಕೆ।
(ಪೀಠಿಕಾ ಸಂಧಿ)

ಇದ ವಿಚಾರಿಸೆ ಬರಿಯ ತೊಳಸಿಯ
ವುದಕದಂತಿರೆಯಿಲ್ಲಿ ನೋಳ್ಪುದು
ಪದುಮನಾಭನ ಮಹಿಮೆ ಧರ್ಮವಿಚಾರಮಾತ್ರವನು ॥
(ಪೀಠಿಕಾ ಸಂಧಿ)

ಮರುಳೆ ಫಲುಗುಣ ಕೇಳು ಸಚರಾ
ಚರವೆನಿಪ ಜಗವೆನ್ನ ಲೀಲಾ
ಚರಿತದಲಿ ತೋರುವದು ಹರೆವುದು ನನ್ನ ನೇಮದಲಿ।

ಎಂದು ಶ್ರೀ ಕೃಷ್ಣನು ಅರ್ಜುನನಿಗೆ ಸ್ಪಷ್ಟ ತಿಳಿವಳಿಕೆ ಕೊಟ್ಟಿದ್ದಾನೆ. ಪಿತಾಮಹ ಭೀಷ್ಮಾಚಾರ್ಯರು ಮಹಾಜ್ಞಾನಿಗಳು. ಅವರು ಕೃಷ್ಣನ ಬಗೆಗೆ ಹೇಳುವ ಮಾತುಗಳಿವು–

ಒಂದು ಮುಖದಲಿ ಜಗವ ಹೂಡುವ
ನೊಂದು ಮುಖದಲಿ ಜಗವ ಸಲಹುವ
ನೊಂದು ಮುಖದಲಿ ಬೇಳುವನು ನಯನಾಗ್ನಿಯಲಿ ಜಗವ।
ಕೊಂದು ಹಗೆಯಲ್ಲೀತ ಸಲುಹಿದ
ನೆಂದು ಮೋಹಿತನಲ್ಲ ಪರಮಾ
ನಂದಮಯ ಹರಿಯು...........

ಸೃಷ್ಟಿ ಸ್ಥಿತಿ ಲಯ ಕಾರಣನು ಶ್ರೀಕೃಷ್ಣನು. ದುಷ್ಟ ಸಂಹಾರದಲ್ಲಿ ಈತನಿಗೆ ಹಗೆತನದ ಲೇಪವಿಲ್ಲ. ಶಿಷ್ಟ ರಕ್ಷಣೆಯಲ್ಲಿ ಮಮತೆ ಮೋಹಗಳ ಸ್ಪರ್ಶವಿಲ್ಲ. ಸರ್ವಪ್ರೇರಕ ಸರ್ವಕರ್ತೃ ಆಗಿದ್ದರೂ ಜೀವರ ಕರ್ಮಕ್ಕೆ ಕೇವಲ ಸಾಕ್ಷಿಯಾಗಿ ನಿಲ್ಲುವನಲ್ಲದೆ ಪಾಪ ಪುಣ್ಯಗಳ ಫಲವು ಅವನಿಗೆ ತಾಕದು. ಈ ಮಾತನ್ನು ಭೀಷ್ಮರಿಂದ ಹೇಳಿಸುವಲ್ಲಿ ಕವಿ ಕುಮಾರವ್ಯಾಸನು ತನ್ನ ಭಾಗವತ ದೃಷ್ಟಿಯನ್ನು ಪ್ರಕಟಗೊಳಿಸಿದ್ದಾನೆ. ಮಹಾಭಾರತದ ಮಹತ್ವದ ಘಟನೆಗಳಲ್ಲೆಲ್ಲ ಶ್ರೀ ಕೃಷ್ಣನು ನಿಂತುಕೊಂಡು ಕಾರ್ಯ ಮಾಡಿಸುತ್ತಾನೆ. ಲೌಕಿಕ ದೃಷ್ಟಿಯಿಂದ ನೋಡುವವರಿಗೆ ಅವನ ಮಾಟ, ಬಗೆ ದೋಷಪೂರ್ಣವಾಗಿ ಪಕ್ಷಪಾತದ್ದಾಗಿ ಕಾಣಬಹುದು. ಅವನ ರೀತಿ, ನೀತಿ ಸ್ವಾರ್ಥ

ಪೂರಿತವಾದುದೆಂದು ಅನಿಸಬಹುದು. ಆದರೆ ಇದು ಪೂರ್ಣ ದೃಷ್ಟಿಯಲ್ಲ ಎಂದು ಹೇಳಬಹುದು. ಇಲ್ಲಿ ದೋಷ ನೋಡುವವನದೇ ಹೊರತು ಬೇರಿಲ್ಲ. ಧರ್ಮಸೂಕ್ಷ್ಮವನ್ನು ಅರಿಯದೆ ಪರಮಾತ್ಮನ ನಿಜಜ್ಞಾನವಿಲ್ಲದೆ ಸಂಕುಚಿತ ದೃಷ್ಟಿಯಿಂದ ನೋಡಿದಾಗ ಕಾಣುವ ಕೃಷ್ಣನ ಪಾತ್ರವೇ ಬೇರೆ. ಆದುದರಿಂದ ಮೇಲಿನ ಮಾತನ್ನು ಲಕ್ಷ್ಯಪೂರ್ವಕವಾಗಿ ಮನನ ಮಾಡಬೇಕು. ಆಗ ಶ್ರೀ ಕೃಷ್ಣನ ಮಾತು, ಕೃತಿ ಅರ್ಥವತ್ತಾಗಿ ತೋರುತ್ತವೆ. ಅವನ ಅಗಣಿತ ಮಹಿಮೆಯ ಅರಿವಾಗುತ್ತದೆ.

ಕುಮಾರವ್ಯಾಸನು ಭೀಷ್ಮರಿಂದ ಪದುಮನಾಭನ ಮಹಿಮೆಯನ್ನು ಹೊಗಳಿಸಿದ್ದೇ ಹೊಗಳಿಸಿದ್ದು. ಕೃಷ್ಣನ ನಿಜದ ನಿಲವು ಭೀಷ್ಮರ ಮಾತಿನಲ್ಲಿ ಯಥಾರ್ಥವಾಗಿ ಮೂಡಿಬಂದಿದೆ.

"ಶ್ರೀಕೃಷ್ಣನು ರಜೋಗುಣದಲ್ಲಿ ಚತುರಾನನ, ತಮೋಗುಣದಲ್ಲಿ ಶಂಕರ, ಸತ್ವಗುಣದಲ್ಲಿ ವಿಷ್ಣುವು. ಶ್ರೀಕೃಷ್ಣನು ಜಗನ್ಮಯನು, ಸರ್ವಾತ್ಮನು, ಮಹೇಶ್ವರನು. ಈತನು ಅವ್ಯಕ್ತನು, ಅಜಾತ, ಅವ್ಯಯ, ಅಪ್ರಮೇಯ, ಅಗಮ್ಯ, ಅದ್ವಿತೀಯ, ಚೈತನ್ಯಾತ್ಮ, ನಿರ್ಗುಣ, ಸರ್ವಗ, ಚಿನ್ಮಯನು.

ಗಗನವೀತನ ನಾಭಿ, ದಶದಿಕ್ಕುಗಳು ಕಿವಿ, ಫಣಿಲೋಕ ವಿಮಳಾಂಘ್ರಿಗಳು. ಧ್ರುವನಿಂ ಮೇಲುಭಾಗ ಮುರಾಂತಕನ ಮುಕುಟ–ಗಗನಮಣಿ; ಶಂಕರವಿರಿಂಚಾದಿಗಳು ದೇವನರೋಮಕೂಪದೊಳಿಹರು. ಬಹಳೇನು ? ಕೃಷ್ಣಾಭಿಧಾನದಲ್ಲಿ ಧರಣಿಯಲಿ ಸಂಚರಿಸುತಿಹ ಬಹುಳ ಬ್ರಹ್ಮನೀತ.

ಇವನನ್ನು ಹೊಗಳಿ ದಣಿಯುವು ವೇದತತಿ, ಕೈಮುಗಿದು ದಣಿಯರು ಕಮಲಭವ ಭವರು. ಬಗೆದು ದಣಿಯರು ಯೋಗಿಗಳು. ಮೂಜಗದ ದೈವದ ದೈವ ಈ ಶ್ರೀಕೃಷ್ಣ."

ಮಹಾಭಕ್ತರೂ ಜ್ಞಾನಿಗಳೂ ಆದ ಭೀಷ್ಮರ ಮಾತಿರಲಿ, ಕೃಷ್ಣ ದ್ವೇಷಿಯಾದ ದುರ್ಯೋಧನನು ಕೃಷ್ಣನನ್ನು ಕುರಿತು ಹೇಳುವ ಮಾತುಗಳನ್ನು ಕೇಳಿ—

ಈತನಂತರ್ಯಾಮಿ ಜೀವ
ವ್ರಾತದಲಿ ಜನಜನಿತವಿದು ಜಗ
ವೀತನಾಜ್ಞೆಯೊಳೊಲಿವುದೆಂದನು ಕೌರವರ ರಾಯ ।
ಸಂಗಿಯೆನಿಸನು ಜಗವ ಹುಟ್ಟಿಸಿ
ನುಂಗಿದೊಡೆ ನಿಷ್ಕರುಣಿಯೆನಿಸನು
ಅಂಗರಕ್ಷೆಯ ಮಾಡಿ ಮೋಹಿತನಲ್ಲ ಮೂಜಗಕೆ
ಜಂಗಮ ಸ್ಥಾವರಕೆ ಚೈತ
ನ್ಯಾಂಗ ರಕ್ಷಕ ಘನಕೆ ಘನ ಅಣು
ವಿಂಗೆ ತಾನಣುವೆನಿಪ ಪರತರವಸ್ತು ನೋಡೀತ ।
ಕೊಲುವನನ್ಯರನನ್ಯರಿಂದವೆ
ಕೊಲಿಸುವನು ಕಮಲಾಕ್ಷನಲ್ಲದೆ
ಉಳಿದ ಜೀವವ್ರಾತಕೀ ಸ್ವಾತಂತ್ರ್ಯವಿಲ್ಲೆಂದ ॥

ಶ್ರೀಕೃಷ್ಣನು ಪರಬ್ರಹ್ಮ ಸ್ವರೂಪನೆಂಬ ನಿಶ್ಚಿತ ಜ್ಞಾನವಿದೆ ದುರ್ಯೋಧನನಿಗೆ. ಶ್ರೀಕೃಷ್ಣನು ಸರ್ವಾಂತರ್ಯಾಮಿ, ಸರ್ವತಂತ್ರ ಸ್ವತಂತ್ರ ಎಂಬುದನ್ನು ತಿಳಿದೇ 'ಎನ್ನ ಹೃದಯದೊಳಿರ್ದು ಮುರಿವನು ಗನ್ನದಲಿ ಸಂಧಿಯನು ರಿಪುಗಳೊಳು' ಎಂದು ಹೇಳುತ್ತಾನೆ.

ಇಳಿದನವನಿಗೆ ಧಾರುಣಿಯ ಹೊರೆ
ಗಳೆಯಲೋಸುಗವಿಲ್ಲಿ ನಮ್ಮೊಳ
ಗೊಳಗೆ ವೈರವ ಬಿತ್ತಿ ಬರಿಕೈವನು ಮಹಾಬಲವ ॥

ಭೂಭಾರ ಹರಣಕ್ಕಾಗಿ ಭೂಮಿಯ ಮೇಲೆ ಅವತರಿಸಿದ ಮಹಾವಿಷ್ಣುವೀತನೆಂಬ ಪ್ರಜ್ಞೆ ದುರ್ಯೋಧನನಲ್ಲಿದೆ. 'ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ' ವೆಂದು ತಿಳಿದು ಯುದ್ಧಕ್ಕೆ ಸನ್ನದ್ಧನಾಗುತ್ತಾನೆ.

ವೀರ ದೈತ್ಯನ ಸದೆ ಬಡಿದು ಕುರು
ವೀರ ವಂಶದ ರಾಯರೆಮ್ಮೊಳು
ವೈರ ಬಂಧವ ಬಿತ್ತಿ ಕೊಂದವ ಕೃಷ್ಣ ನೀನೆಂದ ॥

ಭೀಮನ ಗದಾ ಪ್ರಹಾರದಿಂದ ನೆಲಕೆ ಬಿದ್ದ ದುರ್ಯೋಧನನು ಹೇಳುವ ಈ ಮಾತುಗಳು ಅವನ ಅರಿವಿಗೆ ಸಾಕ್ಷಿಯಾಗಿವೆ.

ಬಣಗುಗಳು ಭೀಮಾರ್ಜುನರು ಕಾ
ರಣಿಕ ನೀ ನಡುವಾಯಿ ಧರ್ಮದ
ಕಣಿ ಯುಧಿಷ್ಠಿರನೆತ್ತ ಬಲ್ಲನು ನಿನ್ನ ಮಾಯೆಗಳ
ಸೆಣಸನಿಕ್ಕದೆ ನಮ್ಮೊಳಗೆ ಧಾ
ರುಣಿಯ ಭಾರವ ಬಿಡಿಸಲೋಸುಗ
ರಣವ ಹೊತ್ತಿಸಿ ನಮ್ಮ ಬೇಂಟೆಯನಾಡಿಸಿದೆಯೆಂದ ॥

ಭೀಮಾರ್ಜುನರು ಕೌರವರನ್ನು ಕೊಂದರೆಂಬುದು ಲೋಕದ ಸಾಮಾನ್ಯ ಜನರು ಆಡುವ ಮಾತು. ದುರ್ಯೋಧನನ ಮತದಲ್ಲಿ ಭೀಮಾರ್ಜುನರು ಬಣಗುಗಳು; ಅವರಿಂದ ಬೇಂಟೆಯಾಡಿಸಿದವನು ಶ್ರೀಕೃಷ್ಣ. ಕುಮಾರವ್ಯಾಸನ ದುರ್ಯೋಧನನೂ ಭಾಗವತನಂತೆಯೆ ಮಾತನಾಡುತ್ತಾನೆ.

ಲೌಕಿಕ ದೃಷ್ಟಿಯಿಂದ ಭಾರತವನ್ನು ಕಂಡ ಪಂಪ ರನ್ನರಿಗೆ ಅರ್ಜುನ ಭೀಮರೇ ಕಥಾನಾಯಕರಾದರೆ, ಕುಮಾರವ್ಯಾಸನಿಗೆ ಲೋಕನಾಯಕ ಕೃಷ್ಣನೇ ಮಹಾಭಾರತದ ನಾಯಕನಾಗಿ ಹೊಳೆದಿದ್ದಾನೆ.

ಜಗದ ಗುರುವಲ್ಲಾ ಮುರಾಂತಕ
ನಗಣಿತೋಪಮ ಮಹಿಮನಲ್ಲಾ
ಸಗುಣ ನಿರ್ಗುಣನಾ ಮಹಾತ್ಮನನಂತರೂಪವನು
ವಿಗಡಿಸಲು ಜಯವಹುದೆ ಜಾಣರ
ಬಗೆಗೆ ಬಹುದೇ ನಿನ್ನ ಮತವೆಲೆ
ಮಗನೆ ಮರುಳಾದೈ ಮದಾಂಧರ ಮಾತುಗಳ ಕೇಳಿ ॥

ಎಂದು ಅಂಧನೃಪತಿ ಧೃತರಾಷ್ಟ್ರನು ಮಗನಿಗೆ ಬುದ್ಧಿ ಹೇಳುವ ಮಾತುಗಳಲ್ಲಿ ಕೃಷ್ಣನು ಪರಮಾತ್ಮನೆಂಬ ಸಂಪೂರ್ಣ ಅರಿವು ವ್ಯಕ್ತವಾಗಿದೆ.

ಇದು ಮುರಾರಿಯ ಲೀಲೆಗೋಸುಗ
ಉದಯಿಸಿದ ಜಗವು ಇದರೊಳೊಬ್ಬನ
ಸದೆವನು ಒಬ್ಬನ ಹಿಡಿದು ಸಲಹುವನು
ಒಬ್ಬನೊಬ್ಬನಲಿ
ಇದರೊಳಾತಂಗಿಲ್ಲ ಕರುಣಾ
ಸ್ಪದತೆ ನಿಷ್ಕಾರುಣ್ಯ ಭೂಯಂ
ತ್ರದ ವಿನೋದ ಕ್ರೀಡೆ ಕೃಷ್ಣನದು...... ॥

ಎಂದೆನ್ನುತ್ತಾನೆ ಕುಂಭಸಂಭವನು. ಸೃಷ್ಟಿವ್ಯಾಪಾರವೆಲ್ಲ ಶ್ರೀ ಕೃಷ್ಣನಲೀಲೆ. ಲೀಲೆಗೈದೂ ಅವನು ನಿಸ್ಸಂಗಿ. ಪರಮಾತ್ಮನ ಅಚಿಂತ್ಯಾದ್ಭುತ ಈ ಶಕ್ತಿಯನ್ನು ತಿಳಿದೇ ತಮ್ಮ ತಮ್ಮ

ಪಾತ್ರನ್ಗೈದು, ಕರ್ತವ್ಯ ನಿರ್ವಹಿಸಿ ಕೃತಾರ್ಥರಾಗುವ ಹಂಬಲ ದ್ರೋಣಾಚಾರ್ಯರಿಗೆ.

ಮಹಾರಥಿ ಕರ್ಣನು ಕೂಡ ಕೃಷ್ಣನು ಪರದೈವವೆಂಬು ದನ್ನು ಅರಿತಿದ್ದಾನೆ. ಸಂಧಾನವು ವಿಫಲವಾದ ನಂತರ ಮರಳು ವಾಗ ಕೃಷ್ಣನು ಕರ್ಣನನ್ನು ಬರಸೆಳೆದು ತನ್ನೊಡನೆ ಪೀಠದಲ್ಲಿ ಕುಳ್ಳಿರಿಸಿಕೊಂಡಾಗ, 'ಎನಗೆ ನಿಮ್ಮಡಿಗಳಲಿ ಸಮಸೇವನೆಯೆ' ಎಂದು ನುಡಿದು ತನ್ನ ಭಯಭಕ್ತಿ ತೋರುತ್ತಾನೆ. ತಾನು ಹೀನ ಕುಲದವನೆಂಬ ಅಳುಕು ಅವನ ಮನದಲ್ಲಿ ಈ ಆತಂಕವನ್ನುಂಟು ಮಾಡಿದೆಯೆಂದರೂ ಶ್ರೀಕೃಷ್ಣನು ಅವತಾರೀ ಪುರುಷನೆಂಬ ತಿಳಿವಳಿಕೆ ಕರ್ಣನಿಗೆ ಇಲ್ಲದಿಲ್ಲ. ಮುಂದೆ ಅವನೇ ಹೇಳುವ ಮಾತು ಇದನ್ನು ಸ್ಪಷ್ಟವಾಗಿಸುತ್ತದೆ. 'ದಾನವಾಂತಕ ಬೆಸಸು' ಎಂದು ನುಡಿಯುತ್ತಾನೆ. 'ಹರಿಯ ಹಗೆ ಹೋಗೆದೋರದೆ ಉರು ಹದೆ ಬರಿದೆ ಹೋಹುದೆ' ಎಂದು ಮನದಲ್ಲಿ ಚಿಂತಿಸುತ್ತಾನೆ. 'ಕೌರವ ಬಾಳಲರಿಯದೆಕೆಟ್ಟನು. ಈ ಗೋಪಾಲ ಬರಿದೆ ಬಿಡನು, ಜೀವವಕೊಳ್ಳದಿರನು' ಎಂದು ಭವಿಷ್ಯತ್ತಿನ ಪರಿಣಾಮ ವನ್ನು ಊಹಿಸಿಯೇ ಮನೆಗೆ ತೆರಳುತ್ತಾನೆ ಇನಸುತನು. ಸತ್ಯ ಧರ್ಮಗಳ ಬಲ ಪಾಂಡವರಿಗೆ ಇದೆಯೆಂಬುದನ್ನು ತಿಳಿದೇ ಕರ್ಣನು ಜಯದ್ರಥ ವಧೆಯ ನಂತರದಲ್ಲಿ ಕೃಪ ಗುರು ನಂದನ ರೊಂದಿಗೆ ಇಂತು ನುಡಿಯುತ್ತಾನೆ–

ದೈವ ಪೌರುಷದೊಳಗೆ ಶಿವಶಿವ
ದೈವ ಬಲವೇ ಬಲವಲಾ ನಿ
ರ್ದೈವರಂಗೈತಳಕೆ ಬಂದರೆ ಪರುಷ ಪಾಷಾಣ

ದೈವದೂರರು ಧರ್ಮಹೀನರು
ನೆಯ್ವ ನೆಯ್ಗೆಗಳೆನುತ ಮಿಗೆ ಬಿಸು
ಸುಯ್ವುತಿರ್ದರು ಕರ್ಣ ಕೃಪ ಗುರುನಂದನಾದ್ಯರರು॥

ತಮ್ಮ ಸಾಮರ್ಥ್ಯ ಪೌರುಷಗಳು ಹಿರಿದೈವ ಕೃಷ್ಣನ ಬಲದೆದುರು ನಿರರ್ಥಕವೆಂಬ ಅರಿವು ಎಲ್ಲರಲ್ಲಿದೆ. ಅಂತೆಯೆ–

ಮುನಿದು ಮಾಡುವದೇನು ಕೃಷ್ಣನ
ನೆನಹು ಘನ ನಮ್ಮಸುವ ನಾವೀ
ಜನಪತಿಗೆ ಮಾರಿದೆವು ನಮಗೀ ಚಿಂತೆಯೇಕೆನುತ॥

ಎಂದು ಇನಸುತಾದಿಗಳು ಸುಮ್ಮನಿದ್ದರಂತೆ. ಕರ್ತವ್ಯದ ಪ್ರಜ್ಞೆ, ಸ್ವಾಮಿನಿಷ್ಠೆ, ಜೋಳದ ಪಾಳಿಗಾಗಿ ರಣರಂಗದಲ್ಲಿ ತಮ್ಮ ಅಸುವನ್ನು ನೀಗುವ ಹವಣಿಕೆಯಲ್ಲಿದ್ದಾರೆ ಮಾತ್ರ. ಗೆಲುವಿನ ಆಸೆ ತಪ್ಪಿಯೂ ಅವರಲ್ಲಿ ಸುಳಿಯದು. ಈ ನಿರ್ದುಷ್ಟ ಜ್ಞಾನವೇ ಅವರಿಗೆ ಮುಕ್ತಿಯದಾರಿಯಲ್ಲಿ ಮುನ್ನಡೆಯಲು ಸಹಾಯಕವಾಗುತ್ತದೆ. ಅವಸಾನಕಾಲಕ್ಕೆ ನುಡಿವ ಕರ್ಣನ ಮಾತುಗಳನ್ನು ಕೇಳಿ–

......ಮರಣದ ಹೊತ್ತು ಕೃಷ್ಣನ ಕಾಂಬ ಸುಕೃತ ಫಲ॥
ಇಳೆಯ ಮೇಲೆನಗಲ್ಲದಾರಿಗೆ
ಫಲಿಸುವದು ತಾ ಧನ್ಯನೆನುತೆವೆ
ಹಳಚದಸುರಾಂತಕನನೀಕ್ಷಿಸುತಿರ್ದನಾ ಕರ್ಣ ॥

ಮರಣದ ಹೊತ್ತು ಕೃಷ್ಣನ ಕಾಂಬ ಸುಕೃತ ಫಲ ತನಗೆ ಲಭಿಸಿತೆಂದು, ತಾನು ಧನ್ಯನೆಂದು ಬಗೆದು ಎವೆಹಳಚದೆ ಅಸುರಾಂತಕನನ್ನು ಈಕ್ಷಿಸುತ್ತ ಯೋಗಸಮಾಧಿಯಲ್ಲಿದ್ದ ಕರ್ಣನ ಚಿತ್ರವನ್ನು ಕುಮಾರವ್ಯಾಸನು ಇಂತು ಕೊಡುತ್ತಾನೆ.

ಒಳಗೆ ಹೃದಯಾಂಬುಜದ ಮಧ್ಯ
ಸ್ಥಳದೊಳಗೆ ಮುರವೈರಿಯನು ಹೊರ
ವಳಯದಲಿ ಫಲುಗುಣನ ಮಣಿರಥದಗ್ರ ಭಾಗದಲಿ
ಹೊಳೆವ ಹರಿಯನು ಕಂಡನಿದುಹೊರ
ಗೊಳಗೆ ಹರಿ ತಾನೆಂಬ ಭೇದವ
ತಿಳಿದು ನಿಜದೆಚ್ಚರ ಸಮಾಧಿಯೊಳಿರ್ದನಾ ಕರ್ಣ ||

ಹರಿಯು ಸರ್ವಾಂತರ್ಯಾಮಿ, ಸರ್ವಗನೆಂಬ ಮಾತಿನ ಪ್ರತ್ಯಕ್ಷಾನುಭವ ಕರ್ಣನಿಗೆ ಆಗಿದೆ. ತನ್ನ ಹೃದಯಕಮಲದಲ್ಲಿ ಅರ್ಜುನನ ರಥಾಗ್ರಭಾಗದಲ್ಲಿರುವ ಶ್ರೀಹರಿಯೇ ಕಂಗೊಳಿಸಿದಾಗ ಆನಂದತುಂದಿಲನಾಗಿದ್ದಾನೆ ಕರ್ಣ. ನಿಜದೆಚ್ಚರದ ಸಮಾಧಿಯಲ್ಲಿ ಮುಳುಗಿದನೆಂದು ಕವಿ ಬಣ್ಣಿಸಿರುವದನ್ನು ಗಮನಿಸಬೇಕು.

ಕೃಷ್ಣನಿಗೆ ಪ್ರಾಣಸದೃಶರಾದ, ಕೃಷ್ಣ ಪಕ್ಷಪಾತಿಗಳಾದ ಪಾಂಡವರು ಶ್ರೀ ಕೃಷ್ಣನನ್ನು ಹೊಗಳುವದು ದೊಡ್ಡ ಮಾತಲ್ಲ. ಕೃಷ್ಣನ ಕಡುವಿರೋಧಿಗಳೂ, ವೈರಿ ಪಕ್ಷದಲ್ಲಿದ್ದು ಕಾದಿ ಕೈವಲ್ಯ ಪಡೆದ ವೀರರೂ ಜ್ಞಾನಿಗಳೂ ಕೂಡ ಕೃಷ್ಣನ ನಿಜವನ್ನು ಅರಿತು ಹಾಡಿ ಹೊಗಳುವದು ತುಂಬ ಮಹತ್ವದ್ದಾಗಿದೆ. ಪ್ರತಿಯೊಬ್ಬರೂ ಈ ಜಗನ್ನಾಟಕದಲ್ಲಿ ಅಭಿನಯಿಸುವ ಪಾತ್ರಗಳು, ಶ್ರೀಕೃಷ್ಣನೇ ಸೂತ್ರಧಾರನು, ಎಂಬುದನ್ನು ತಿಳಿದಿದ್ದಾರೆ. ಭಾಗವತ ಧರ್ಮದ ಈ ಮುಖ್ಯಮಾತನ್ನು ಕವಿಯು ವಿವಿಧ ಪಾತ್ರಗಳಿಂದ ನುಡಿಸುವ ಬಗೆ ಕವಿಯ ಭಾಗವತ ದೃಷ್ಟಿಗೆ ಸಾಕ್ಷಿಯಾಗಿದೆ.

ಸೂತ್ರದ ಹಾಹೆಗಳೆಂಬ ಪ್ರಜ್ಞೆಯಿಂದ ಪಾತ್ರಗಳ ಜೀವಂತಿಕೆಗೆ ಯಾವ ಚ್ಯುತಿ ಬಂದಿಲ್ಲವೆಂಬುದು ಕುಮಾರ ವ್ಯಾಸನ ಘನತೆಗೆ, ಕಾವ್ಯಪ್ರತಿಭೆಗೆ ನಿದರ್ಶನವಾಗಿದೆ. ಪ್ರತಿ ಯೊಂದು ಪಾತ್ರವೂ ತನ್ನ ತನ್ನ ಮೂಲ ಸ್ವಭಾವಕ್ಕನುಸರಿಸಿ ವರ್ತಿಸಿ ಕರ್ತವ್ಯವನ್ನು ನೆರವೇರಿಸುವದೆಂಬುದನ್ನು ನೋಡು ತ್ತೇವೆ. ಎಲ್ಲವೂ ಪರಮಾತ್ಮನ ಅಧೀನ, ಎಂಬುದನ್ನು ತಿಳಿದೂ ಯಾರೂ ಕೈಯೂರಿ ಕುಳ್ಳಿರುವದಿಲ್ಲ. ಅಂತೆಯೆ ಈ ಬೃಹತ್ ನಾಟಕವು ಸ್ವಾರಸ್ಯಮಯವಾಗಿದೆ.

ಹೀಗೆ ಸರ್ವಜೀವರಿಗೆ ಸಾಕ್ಷಿಯಾಗಿ, ಅಂತರ್ಯಾಮಿ ಯಾಗಿ ಲೋಕವನ್ನು ಪಾಲಿಸುವ ಶ್ರೀಹರಿಯ ಮಹಿಮೆಯನ್ನು ಹೊಗಳುವಲ್ಲಿ ಮಹಾಭಾರತವು ಕವಿ ಕುಮಾರವ್ಯಾಸನಿಗೆ ಸಾಧನ ವಾಗಿದೆ, ಸಹಾಯಕವಾಗಿದೆ.

೩. ಭಾಗವತ ಸೃಷ್ಟಿ

ಕುಮಾರವ್ಯಾಸ ಕವಿಯ ದೃಷ್ಟಿಯಲ್ಲಿ ಮಹಾಭಾರತವು ಶ್ರೀಕೃಷ್ಣ ಚರಿತ್ರೆಯಷ್ಟೇ. ಪಾಂಡವರು ಕೌರವರು ಮಹಾಭಾರತದಲ್ಲಿ ಪ್ರಧಾನಪಾತ್ರಗಳಾದರೂ ಅವರೆಲ್ಲರಿಗೆ ಪ್ರೇರಕ ಶಕ್ತಿಯು, ಜಗಚ್ಚಾಲಕನು ಶ್ರೀಹರಿಯೇ ಎಂಬುದು ಭಾಗವತನ ನಂಬಿಕೆ. ಆ ದೃಷ್ಟಿಯಲ್ಲಿ ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಹಲವು ಸನ್ನಿವೇಶಗಳನ್ನು ಪ್ರಾಧಾನ್ಯತೆಯನ್ನಿತ್ತು ಚಿತ್ರಿಸಿದ್ದಾನೆ. ಇನ್ನು ಕೆಲವನ್ನು ಬದಿಗೆ ಸರಿಸಿದ್ದಾನೆ. ಕೆಲವನ್ನು ಸಂಕ್ಷಿಪ್ತಗೊಳಿಸಿದ್ದರೆ ಮತ್ತೆ ಕೆಲವನ್ನು ವಿಸ್ತರಿಸಿದ್ದಾನೆ.

ಸುಭದ್ರಾ ಪರಿಣಯ

ಪಂಪಕವಿ ಅರ್ಜುನ ಸುಭದ್ರಾ ಪರಿಣಯ ಪ್ರಸಂಗದಲ್ಲಿ ಅರ್ಜುನನ ಕಪಟಸನ್ಯಾಸದ ಪ್ರಸ್ತಾಪವನ್ನು ಮಾಡಿಲ್ಲ. ಅರಿಗನನ್ನು ಅರ್ಜುನನಿಗೆ ಹೋಲಿಸಿ ಕಾವ್ಯವನ್ನು ಹೇಳಿರುವದರಿಂದ ಅದು ಅವನ ಘನತೆಗೆ ಕುಂದೆಂದು ಪರಿಗಣಿಸಿರಬೇಕು. ಅಲ್ಲದೆ ಅರ್ಜುನ ಸುಭದ್ರೆಯರ ಪ್ರಥಮ ದರ್ಶನ, ಪ್ರಣಯಾಂಕುರ, ವಿರಹ, ಸಮ್ಮಿಲನ, ಕೃಷ್ಣಸಹಾಯ,—ಸುಭದ್ರೆಯೊಡನೆ ಪಯಣದಲ್ಲಿ ಮುಕ್ತಾಯಗೊಳ್ಳುವ ಪಂಪನ ಕಥೆಯಲ್ಲಿ ಮಹಾಕಾವ್ಯದ ಲಕ್ಷಣಗಳಿಗೆ ಅನುಸರಿಸಿ ವಿವಿಧ

ವರ್ಣನೆಗಳು ಮೂಡಿಬಂದಿವೆ; ವಿಪ್ರಲಂಭಶೃಂಗಾರ ಕಾಣಿಸಿ ಕೊಂಡಿದೆ. ಸೂಳಿಗೇರಿಯ ಬಣ್ಣನೆಯೂ ಇಲ್ಲಿ ಇಂಬುಗೊಂಡಿದೆ ಯೆಂಬುದನ್ನು ಲಕ್ಷಿಸಿದರೆ ಪಂಪನ ಲೌಕಿಕದೃಷ್ಟಿಯ ಅರಿವಾಗ ದಿರದು. ತನ್ನ ಲೋಕಜ್ಞಾನ, ವರ್ಣನಾಕೌಶಲ, ಕಾವ್ಯ ಪ್ರೌಢಿಮೆ ಪ್ರತಿಭೆಗಳನ್ನು ಮೆರೆಯಲು ಕಾವ್ಯವೊಂದು ಪಂಪ ನಿಗೆ ಸಾಧನವೆಂದರೆ ತಪ್ಪಾಗದು. ನಾಯಕ ನಾಯಿಕಾಭ್ಯು ದಯ ವರ್ಣನೆ, ಪ್ರೇಮೋದಯ ಪ್ರಸ್ತಾಪ ಮುಂತಾದವು ಗಳಿಗೆ ಪ್ರಾಧಾನ್ಯತೆಯಿತ್ತಿದ್ದಾನೆ. ಪಂಪಭಾರತದಲ್ಲಿ ಅರ್ಜುನ ಸುಭದ್ರೆಯರು ಕೃಷ್ಣನ ಸಲಹೆಯಂತೆ ಬಲದೇವನಿಗೆ ತಿಳಿಯದ ಹಾಗೆ ತೆರಳುತ್ತಾರೆ. ಕೋಪದಿಂದ ಕೆರಳಿದ ಬಲಭದ್ರನಿಗೆ ಶ್ರೀಕೃಷ್ಣನೇ ಸಮಾಧಾನ ಮಾಡುತ್ತಾನೆ. ಆದರೂ ಕೃಷ್ಣನ ಪಾತ್ರಕ್ಕೆ ಹೆಚ್ಚಿನ ಮಹತ್ವ ಅಲ್ಲಿಲ್ಲ. ಇದೇ ಸನ್ನಿವೇಶವನ್ನು ಭಾಗವತ ಕವಿಯಾದ ಕುಮಾರವ್ಯಾಸನು ಚಿತ್ರಿಸುವ ಬಗೆ ಯನ್ನು ನೋಡಬೇಕು.

ಕೃಷ್ಣರಾಯನ ಪುರದೊಳಗೆ ವರ್ಷಾಕಾಲವನ್ನು ನೂಕುವ ನಿಶ್ಚಯಮಾಡಿ ಅರ್ಜುನನು ಸನ್ಯಾಸಿ ವೇಷವನ್ನು ಅಳವಡಿಸಿ ಕೊಂಡು ದ್ವಾರಕೆಯ ಹೊರವಲಯದ ವನದ ಮಧ್ಯದಲ್ಲಿ ದ್ದಾನೆ. ಇರುಳುಕತ್ತಲೆಯಲ್ಲಿ ಸುರಿವ ಸುರಿಮಳೆಗೆ ಸಲೆ ಸೇಡು ಗೊಂಡು ಕೃಷ್ಣನನ್ನು ನೆನೆವುತ್ತಿದ್ದಾನೆ. ಅತ್ತ ಸತ್ಯಭಾಮೆ ಯೊಡಸಿರ್ದ ದೇವನು ಅರ್ಜುನನ ಅವಸ್ಥೆಯನ್ನು ನೆನೆದು ನಕ್ಕನು. ಪತಿಯ ಮುಗುಳ್ನಗೆ ಕಂಡು ಸತ್ಯಭಾಮೆಗೆ ' ಕೃಷ್ಣನ ಮನದಲ್ಲಿ ಆವಳೋ ಸುಳಿದಳು ' ಎಂಬ ಸಂಶಯ ಮೂಡಿ

ತಂತೆ. ಕವಿ ಕುಮಾರವ್ಯಾಸನ ವಿನೋದಬುದ್ಧಿ, ಸ್ವಭಾವ ನಿರೀಕ್ಷಣಾ ಸಾಮರ್ಥ್ಯ, ರಸಿಕತೆಗಳು ಇಲ್ಲಿ ಅದೆಂತು ನಯವಾಗಿ ಕಾಣಿಸಿಕೊಂಡಿವೆಯೆಂಬುದನ್ನು ಕಾಣಬೇಕು. ಆಗ ಕೃಷ್ಣನು ಸತ್ಯಭಾಮೆಗೆ ನಿಜಸಂಗತಿಯನ್ನು ತಿಳಿಸಿ, ಅರ್ಜುನನ ಸ್ಥಿತಿಯನ್ನು ಕುರಿತು 'ಮರದ ಹೊಳ್ಳೊಳು ಹೊಕ್ಕು ಸಿಕ್ಕಿದ ನರಿಯವೊಲ್' ಆಗಿದೆಯೆನ್ನುತ್ತಾನೆ. ಕವಿಯು ಬಳಸಿದ ಉಪಮೆ ಅರ್ಜುನನ ಮನೋಭಾವ ಸ್ಥಿತಿಗತಿಗಳನ್ನು, ಕಪಟ ಸನ್ಯಾಸದ ಬಗೆಯನ್ನು ಚೆನ್ನಾಗಿ ಧ್ವನಿಸುತ್ತದೆಂಬುದನ್ನು ಲಕ್ಷಿಸಬಹುದು.

ಕೃಷ್ಣನು ಫಲುಗುಣನ ಬಳಿ ಬಂದು 'ಈ ಶೈಲದ ಸಮೀಪದೊಳಿಂದು ನಿಲು, ಬಲಭದ್ರನೈತಹನು, ಉಚಿತ ವಚನದಲಿ ಮಂದಿರಕೆ ಬರಹೇಳಿದರೆ ಬಾ, ಮುಂದೆ ನಿನ್ನ ಇಷ್ಟಾರ್ಥ ಸಿದ್ಧಿಪುದು' ಎಂದು ಸಂತವಿಸಿ ಮರಳುತ್ತಾನೆ. ಪರಮಹಂಸನ ಸುಳಿವಿನ ಸುದ್ದಿಯನ್ನು ನಗರದಲ್ಲಿ ಹರಹುತ್ತಾನೆ. ಬಲಭದ್ರನು ಸನ್ಯಾಸಿ ಅರ್ಜುನನ್ನು ಕರೆತಂದು ಕನ್ಯಾಭವನದೊಳಿರಿಸಿ ಶುಶ್ರೂಷೆಗೆ ಸುಭದ್ರಾದೇವಿಯನ್ನು ನಿಯಮಿಸಿ 'ಇವರು ಅಪೂರ್ವ ಮಹಾತ್ಮಕರು. ನೀನಿವರ ದೇವಾರ್ಚನೆ ಸಮಾಧಿ ಪ್ರವರದಲಿ ಬೆಸಸಿದನು ಮಾಡುವದು' ಎಂದು ಹೇಳುತ್ತಾನೆ. ಕೃಷ್ಣನ ಮುಂದೆ ತಾನು ಮಾಡಿದ ವ್ಯವಸ್ಥೆಯ ವಿಷಯ ಹೇಳಿದಾಗ ಕೃಷ್ಣನು 'ಮರೆದು ತಂಗಿಯನೊಯ್ದು ಬಿಸುಟಿರೆ ಬಣಗು ತಿರುಕನಲಿ? ಅರಸು ಮಗಳನು ತೊತ್ತುಗೆಲಸಕೆ ಪರುಠವಿಸಿದಿರೆ ಶಿವಶಿವಾ!' ಎಂದು ಉದ್ಗರಿಸುತ್ತಾನೆ. ಇಲ್ಲೆಲ್ಲ ಕೃಷ್ಣನಾಡುವ

ಕಪಟನಾಟಕವು ಅರ್ಜುನನ ಕಪಟ ಸನ್ಯಾಸದಷ್ಟೇ ಸ್ವಾರಸ್ಯ ವಾಗಿದೆ. ಕೃಷ್ಣನ ಮಾತಿಗೆ ಬಲರಾಮನು ಗಜರಿದಾಗ, 'ನಿಮಗೀ ದುರಾಗ್ರಹವೇಕೆ ? ಕಾಂಬಿರಿ ಫಲವನು ಅಗ್ರದಲಿ, ಎಂದು ಎಚ್ಚರಿಸುತ್ತಾನೆ. ಕವಿ ಕುಮಾರವ್ಯಾಸನು ಹರಿಯ ಈ ಲೀಲಾವಿನೋದವನ್ನು ಕಂಡು ಹರ್ಷತುಂದಿಲನಾಗಿ, 'ಹರಿಯ ವಿನೋದದ ರಚನೆಯ ಏನನೆಂಬೆನು!' ಎಂದೆನ್ನುತ್ತಾನೆ ವೈಶಂಪಾಯನ ಮುನಿಯ ಮಾತಿನಲ್ಲಿ.

ಕುಮಾರವ್ಯಾಸನು ಅರ್ಜುನ ಸುಭದ್ರೆಯರ ಪ್ರಣಯ ವನ್ನು ಕುರಿತು ಹೇಳುವ ಒಂದೇ ಒಂದು ಮಾತು ಬಹು ಉಚಿತವೂ ಅರ್ಥಪೂರ್ಣವೂ ಆಗಿದೆ.

ಬಾಲಕಿಗೆ ಸಂನ್ಯಾಸಿ ದೇವರ
ಮೇಲೆ ಮನವಾಯ್ತು ವರಿಗೀಕೆಯ
ಮೇಲೆ ನೆಲೆಸಿತು ಚಿತ್ತ.........................||

ಕಾಮನ ಬೇಳುವೆಗೆ ಇಬ್ಬರೂ ಬೆಂಡಾದರಂತೆ. ಸುಭದ್ರೆಯ ಪ್ರೀತಿಮೋಹದಲ್ಲಿ ಸಿಲುಕಿದ ಸನ್ಯಾಸಿ ಅರ್ಜುನನ ಸ್ಥಿತಿಯನ್ನು ಕವಿ ತುಂಬ ವಿನೋದಪೂರ್ಣವಾಗಿ ಚಿತ್ರಿಸಿದ್ದಾನೆ.

ಮಿಡುಕುವದು ಬಾಯ್, ಚಿತ್ತವವಳಲಿ
ತೊಡಕಿಹುದು, ಜಪಮಾಲೆ ಬೆರಳಲಿ
ನಡೆವುತಿಹುದು,+ಅಕ್ಷಿಗಳು ಮುಕ್ಕಳಿಸಿಹವು ಮಾನಿನಿಯ
ಪ್ಮೃಡನ ಪೂಜೆಗೆ ಕೈ, ಸುಭದ್ರೆಯ
ಹಿಡಿಹಿನಲಿ ಮನ, ಪರಸಮಾಧಿಯ
ತೊಡಹು ಹೊರಗೊಳಗಿಂದುಮುಖಿ.................||

ಹರಿಯು ವಸುದೇವ ದೇವಕಿಯರೊಂದಿಗೆ ಬಲನರಿಯದಂತೆ ಸುಭದ್ರೆಯನ್ನು ನರನಿಗಿತ್ತು ಮದುವೆ ಮಾಡಿ ರಥವೇರಿಸಿ ಕಳುಹುತ್ತಾನೆ. ಸನ್ಯಾಸಿ ಸುಭದ್ರೆಯೊಡನೆ ರಥದಲ್ಲಿ ಹೊರಟ ಸಂಗತಿ ಕರ್ಣೋಪಕರ್ಣವಾಗಿ ಬಲರಾಮನಿಗೆ ತಿಳಿಯುತ್ತದೆ. ಕೆರಳಿದ ಬಲರಾಮನು 'ಅರಸುಮಗಳನು ಕೊಂಡುಹಾಯ್ದನೆ ತಿರುಕಮುನಿ?....ಮುರಾರಿಯ ಮಾತು ತಾಗಿತು' ಎನ್ನುತ್ತಾನೆ ಕೃಷ್ಣನ ಕಪಟವನ್ನರಿಯದೆ. ಕೃಷ್ಣನು ಅದಕ್ಕೆ ಉತ್ತರವಾಗಿ 'ಹೇಳಿವೆ ನಾವ್ ಮುನ್ನ? ನೀವ್ ನೀಲಾಳಕಿಯ ಕೆಡಿಸಿದಿರಲಾ!....ಚಾಳಿಸಿದುದು ಅಪಕೀರ್ತಿ, ವಿಕಾಳಿಸಿತು ಯದುವಂಶ' ಎಂದು ಚುಚ್ಚುನುಡಿಯುತ್ತಾನೆ.

ಅರ್ಜುನನ ಮೇಲೆ ನುಗ್ಗಿದ ಯಾದವ ಸೈನ್ಯ ಪರಾಭವಗೊಂಡ ವಾರ್ತೆ ಕೇಳಿ ಮುಳಿದ ಬಲಭದ್ರನು 'ಸಂನ್ಯಾಸಿ ಮಾಡಿದ ಹುಸಿಯುಪನ್ಯಾಸಕೆ ರಸನೆಯನು ಕೊಯ್ವೆನು' ಎಂದು ದೇವಕಿಯ ಮೇಲೆ ಆಣೆಯಿಟ್ಟು ಗರ್ಜಿಸಿದಾಗ ಕೃಷ್ಣನು ನಿಜವೃತ್ತಾಂತವನ್ನು ಅರುಹುತ್ತಾನೆ. ಆಗ ಬಲನಿಗೆ 'ಕೃಷ್ಣನ ಕುಮಂತ್ರವಿದು' ಎಂದು ತಿಳಿಯುತ್ತದೆ. ಪುರಕೆ ಮರಳುತ್ತಾನೆ.

ಹೀಗೆ ಸುಭದ್ರಾ-ಅರ್ಜುನ ಪರಿಣಯ ಪ್ರಸಂಗವನ್ನು ಕವಿ ಕುಮಾರವ್ಯಾಸನು ಶ್ರೀ ಕೃಷ್ಣನ ಕಪಟನಾಟಕ ಲೀಲಾ ವಿನೋದವನ್ನು ಬಗೆಗಾಣಿಸಲು ಬಳಸಿರುವನು. ಕಪಟ ಸನ್ಯಾಸದ ವಿಡಂಬನೆಯನ್ನು ಅದೆಷ್ಟು ಹಾಸ್ಯಪೂರ್ಣವಾಗಿ ಮಾಡಿರುವನೆಂಬುದನ್ನೂ ನೋಡಬೇಕು. ಒಂದೇ ಸನ್ನಿವೇಶ ಕವಿಗಳಿಬ್ಬರ ಕೈಯಲ್ಲಿ ಬೇರೆ ಬೇರೆ ರೂಪ ತಾಳಿದೆ. ಅದಕ್ಕೆ

ಅವರವರ ಭಿನ್ನ ದೃಷ್ಟಿ ಉದ್ದೇಶಗಳೇ ಕಾರಣವಾಗಿರುತ್ತವೆ. ಕುಮಾರವ್ಯಾಸನ ದೃಷ್ಟಿ ಭಾಗವತ ದೃಷ್ಟಿ. ಅದಕ್ಕೆ ತಕ್ಕಂತೆ ಈ ಕಥೆಯನ್ನು ಸನ್ನಿವೇಶವನ್ನು ನಿರೂಪಿಸಿದ್ದಾನೆ. ಶ್ರೀಕೃಷ್ಣನು ಪರಬೊಮ್ಮನಾದರೂ ಮಾನವರಲ್ಲಿ ಮಾನವನಾಗಿ ಅದೆಂತು ನಟಿಸುವನೆಂಬುದಕ್ಕೆ ಇದಕ್ಕಿಂತ ಸ್ವಾರಸ್ಯಕರವಾದ ಮತ್ತೊಂದು ನಿದರ್ಶನ ಬೇಕಿಲ್ಲ. ಎಲ್ಲ ಘಟನೆಗಳ ಹಿಂದೆ ಹರಿಯ ಸಂಕಲ್ಪ ಪ್ರೇರಕವಾಗಿ ಕಾರಕವಾಗಿ ನಿಲ್ಲುತ್ತದೆಂಬುದನ್ನು ಕವಿ ಎತ್ತಿ ತೋರಿದ್ದಾನೆ.

ಅಗ್ರಪೂಜೆ

ನಾರದ ಮಹರ್ಷಿ ರಾಜಸೂಯಯಾಗವನ್ನು ಮಾಡಲು ಸೂಚಿಸಿದನು. ಧರ್ಮರಾಜನು ಅಂತೆಗೆಯ್ವೆನೆಂದು ಹೇಳಿ ಕಳುಹಿ, ಪುರುಷೋತ್ತಮನನ್ನು ಸಲಹೆಗಾಗಿ ಕರೆಕಳುಹಿದನು. ಕೃಷ್ಣನು ದ್ವಾರಕೆಯಿಂದಾಗಮಿಸಿ, ರಾಜಸೂಯಯಾಗವು ಸುಲಭ ಸಾಧ್ಯವಲ್ಲ, ಆ ಮಾತನ್ನು ಕೇಳಿದಲ್ಲಿಯೇ ಮರೆಯುವ ದೆಂದು ನುಡಿದನು. ಈ ಮಾತು ಕೇಳಿ ಭೀಮಾರ್ಜುನರು ಕೆರಳಿದರು. ವೈರಿ ವೀರರ ಬೆನ್ನು ಮುರಿಯಲು ಅಪ್ಪಣೆ ಕೇಳಿ ದರು. ಯಾಗವನ್ನು ಮಾಡುವದೇ ಆದರೆ ಮೊದಲು ಜರಾ ಸಂಧನನ್ನು ಮುರಿವುದೆಂದು ಸೂಚಿಸಿದನು. ಬಳಿಕ ಮಧುರಾ ಪುರಿಗೆ ಮರಳಿದನು.

ಇದು ಪಂಪನ ನಿರೂಪಣೆ. ಜರಾಸಂಧವಧೆಯ ವರ್ಣನೆಗೆ ಒಂದು ಶ್ಲೋಕ ಮಾತ್ರ ಮೀಸಲು. ಪಂಪನ ದೃಷ್ಟಿಯಲ್ಲಿ ಅದು ಉಚಿತವೇ ಸರಿ. ಕಥಾನಾಯಕನು ಅರ್ಜುನನಾಗಿರುವಾಗ

ಭೀಮನ ಬಲಪರಾಕ್ರಮದ ವರ್ಣನೆಗೆ ಅನವಶ್ಯಕವಾಗಿ ಕಾವ್ಯ ದಲ್ಲಿ ಎಡೆಗೊಡುವದು ಅನುಚಿತವೆಂಬುದನ್ನು ಪಂಪಕವಿ ಅರಿತಿ ದ್ದಾನೆ. ವಿಜಯನ ದಿಗ್ವಿಜಯದ ವರ್ಣನೆಗೆ ಇಂಬಿತ್ತು ಅರಿಗನ ಪರಾಕ್ರಮ ವರ್ಣನೆಗೆ ಅವಕಾಶ ಮಾಡಿಕೊಂಡಿದ್ದಾನೆ.

ಕುಮಾರವ್ಯಾಸನು ಕಾವ್ಯ ಪ್ರಾರಂಭದಲ್ಲಿಯೇ 'ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮವಿಚಾರ ಮಾತ್ರ ವನು' ಎಂದು ಹೇಳಿರುವನಷ್ಟೇ. ಅದಕ್ಕನುಸಾರವಾಗಿ ನಾರದ ಮುನಿಯಿಂದ ರಾಜಧರ್ಮವನ್ನು ಧರ್ಮಜನಿಗೆ ಉಪದೇಶ ಮಾಡಿಸುತ್ತಾನೆ. ಇದಕ್ಕೆ ಕವಿಯು ಐವತ್ತೈದು ಪದ್ಯಗಳನ್ನು ಬಳಸಿರುವನು. ಕೇಳುವವರಿಗೆ ಬೇಸರ ಬರುವದೆಂಬುದನ್ನೂ ಲಕ್ಷಿಸನು ಆತ. 'ಪದದ ಪ್ರೌಢಿಯ ನವರಸಂಗಳವುದಿತ ವೆನುವಭಿಧಾನಭಾವವ ಬೆದಕಲಾಗದು' ಎಂದು ಎಚ್ಚರಿಸಿ ದ್ದಾನೆ ಕೂಡ. ಕವಿ ಕುಮಾರವ್ಯಾಸನಿಗೆ ನಿಶ್ಚಿತ ಗುರಿಯಿದೆ. ಅದನ್ನು ಲಕ್ಷಿಸಿ ಮುನ್ನಡೆವನಲ್ಲದೆ ಮತ್ತೊಂದನ್ನು ಬಗೆಯನು.

ಧರ್ಮರಾಜನು ಶ್ರೀಕೃಷ್ಣನನ್ನು ಕರೆಕಳುಹುತ್ತಾನೆ. ಬಲಭದ್ರನನ್ನು ಹಿಂದಿರಿಸಿ ಕೃಷ್ಣನು ಇಂದ್ರಪ್ರಸ್ಥಕ್ಕೆ ಆಗಮಿ ಸುತ್ತಾನೆ. ಭೂಪತಿ ಧರ್ಮಸುತನು ಪರಮಾದರದಿಂದ ಸ್ವಾಗತಿಸಿ ಏಕಾಂತದಲ್ಲಿ ಕರೆದೊಯ್ದು ರಾಜಸೂಯಯಾಗ ವ್ರತವನ್ನು ಕೈಕೊಳ್ಳುವ ಆಸೆಯನ್ನು ವಿದಿತಪಡಿಸುತ್ತಾನೆ. 'ಸಾಗರವ ದಾಟಿಸು ಜೀಯ, ಭವಸಾಗರದಿಂ ಇದು ಮಿಗಿಲೆ ಮುರಾಂತಕ ?' ಎಂದು ಕೇಳುತ್ತಾನೆ. ಪ್ರಾರಂಭದಲ್ಲಿ ಮುರಾರಿಯು ನಕ್ಕು 'ಮುನಿ ಹಾಯಿಕ್ಕಿದನಲಾ ಬಲೆಯ

ನಕಟಾ' ಎಂದು ಉದ್ಗರಿಸಿ, ಯಾಗವನ್ನು ಕೈಕೊಳ್ಳುವಲ್ಲಿ ಬರಬಹುದಾದ ವಿಘ್ನಗಳನ್ನೆಲ್ಲ ಸಾದ್ಯಂತವಾಗಿ ಹೇಳುತ್ತಾನೆ. ಬಲಶಾಲಿ ಮಾಗಧನನ್ನು ಮುರಿದಿಕ್ಕುವದು ಗಹನವೆನ್ನುತ್ತಾನೆ. ಅದನ್ನು ಕೇಳಿ ಭೀಮನು 'ರಣದಲಿ ತರಿವೆನಾತನ' ಎಂದು ಗುಡುಗುತ್ತಾನೆ. 'ಬಿಲ್ಲುಬಾಣಗಳೇಕೆ? ರಾಮಭೃತ್ಯ ಧ್ವಜ ವಿಳಾಸವಿದು ಲೋಕರಕ್ಷಾಶಿಕ್ಷೆಗಿಂತಿವೆ ಸಾಕು' ಎನ್ನುತ್ತಾನೆ ಅರ್ಜುನನು. ಆಗ ಕೃಷ್ಣನು 'ಎಮಗೆ ಭೀಮಾರ್ಜುನರ ಕೊಡು. ರಿಪುರಮಣಿಯರ ಸೀಮಂತ ಮಣಿಗಳ ನಿಮಿಷದಲಿ ತರಿಸುವೆನು' ಎಂದು ಭರವಸೆಯಿತ್ತು ಯಜ್ಞ ಕಾರ್ಯಾರಂಭಕ್ಕೆ ಮೊದಲು ಮಾಡಲು ಹೇಳುತ್ತಾನೆ. ಆಗ ಧರ್ಮರಾಜನು ಹೇಳುವ ಮಾತಿದು—

> ಕಂಗಳನುಜರು, ಚಿತ್ತ ನೀವೆ
> ನ್ನಂಗವಣೆಗಿನ್ನೇನು ಭಯವಾ
> ವಂಗದಲಿ, ನಂಬಿಹೆವಲೇ ನಿಮ್ಮಂಘ್ರಿಪಂಕಜವ.
> ಸಂಗರದ ಜಯ ನಿನ್ನದು,+ಅಲ್ಲಿಯ
> ಭಂಗ ನಿನ್ನದು, ಭಕ್ತಜನದನು
> ಸಂಗಿ ನೀನಿರಲೇನು ನಮಗರಿದು..................॥

'ಜಯಾಪಜಯಗಳೆರಡು ನಿನ್ನವು' ಎಂದು ಸರ್ವಾರ್ಪಣ ಭಾವದಿಂದ ಶ್ರೀಕೃಷ್ಣನಿಗೆ ಶರಣುಹೋಗುವ ಧರ್ಮಜನು ಪರಮಭಾಗವತನು. ಶ್ರೀಕೃಷ್ಣನು 'ಭಕ್ತಜನದ ಅನುಸಂಗಿ' ಎಂಬುದು ಅವನಿಗೆ ಪೂರ್ಣ ಗೊತ್ತಿದೆ. ಅಂತೆಯೇ ಕೃಷ್ಣನು ಕಾರ್ಯಭಾರವನ್ನು ಹೊತ್ತಾಗ ಅವನಿಗೆ ನಿಶ್ಚಿಂತೆ.

ಶ್ರೀ ಕೃಷ್ಣನು 'ಅಸುರರೊಳು ಅಗಡು ಮಾಗಧನು. ಅವನ ಮುರಿದರೆ ಸುಗಮ ನಿಮ್ಮಯ್ಯಂಗೆ ಸುರಪದ'ವೆಂದು ಸೂಚಿಸಿ, ಜರಾಸಂಧ ಕಥೆಯನ್ನು ಹೇಳುತ್ತಾನೆ. ಸುಮುಹೂರ್ತದಲ್ಲಿ ಭೀಮಾರ್ಜುನರೊಂದಿಗೆ ಜರಾಸಂಧ ನಗರಕ್ಕೆ ನಡೆದು ವಿಪ್ರವೇಷ ದಲ್ಲಿ ಅರಮನೆಯ ಸಾರುತ್ತಾರೆ. 'ಆರಿವರು ದೇವತ್ರಯವೊ ಜಂಭಾರಿ ಯಮ ಮಾರುತರೊ........'ಎಂದು ಜರಾಸಂಧನು ಅಚ್ಚರಿಗೊಂಡು ಕುಶಲಪ್ರಶ್ನೆ ಮಾಡುತ್ತಾನೆ. ಆಗ ಕೃಷ್ಣನು ಕೊಡುವ ಉತ್ತರವಿದು-

ಎಲವೊ ಧರೆಯೊಳಧರ್ಮಶೀಲರ
ತಲೆಯ ಚೆಂಡಾಡುವೆವು ಧರ್ಮವ
ನೊಲಿದು ಕೊಂಡಾಡುವೆವು ಶಿಕ್ಷಾರಕ್ಷಣವ್ಯಸನ
ನೆಲೆ ನಮಗೆ.........

ತರುವಾಯ ತಾವಾರೆಂಬುದನ್ನು ಸ್ಪಷ್ಟಗೊಳಿಸುತ್ತಾನೆ. 'ಕಾಳ ಗವಕೊಡು ನಮ್ಮೊಳೊಬ್ಬರಿಗೆ' ಎಂದು ಆಹ್ವಾನಿಸುತ್ತಾನೆ. 'ಭೀಮಸೇನ ಸಮರ್ಥಸಹನು. ಆತಂಗೆ ಕೊಟ್ಟೆನು ಕಳನ ಕಾಳಗವ' ಎಂದು ನುಡಿಯುತ್ತಾನೆ ಜರಾಸಂಧನು. ಘನ ಘೋರ ಕಾಳಗದ ತರುವಾಯ ಕೊನೆಗೆ ಭೀಮನು ಜರಾಸಂಧ ನನ್ನು ಸೀಳಿ ಕೊಲ್ಲುತ್ತಾನೆ. ಶ್ರೀಕೃಷ್ಣನು ಜರಾಸಂಧನ ಮಗ ನನ್ನು ಪಟ್ಟಕ್ಕೆ ಕುಳ್ಳಿರಿಸಿ, ಬಂಧನದಲ್ಲಿದ್ದ ರಾಜರುಗಳನ್ನೆಲ್ಲ ಮುಕ್ತಗೊಳಿಸಿ ಇಂದ್ರುಪ್ರಸ್ಥಕ್ಕೆ ಬರುತ್ತಾನೆ.

ಭೀಮಾರ್ಜುನ ನಕುಲಸಹದೇವರು ಭೂಮಂಡಲದ ಸರ್ವದಿಕ್ಕುಗಳನ್ನು ಸುತ್ತಿ ಎದುರಾಂತ ಭೂಪರನ್ನು ಗೆಲ್ದು,

ಕಪ್ಪ ಕಾಣಿಕೆಗಳನ್ನು ಕೊಂಡುತರುತ್ತಾರೆ. ಸಕಲ ಋಷಿ ಮುಖ್ಯರು ಮಹೀಪಾಲಕರು ರಾಜಸೂಯ ಯಾಗಕ್ಕಾಗಿ ಬರುತ್ತಾರೆ. ಯಜ್ಞಮಂಟಪ ಸಿದ್ಧವಾಗುತ್ತದೆ. ಸರ್ವರಿಗೂ ಒಂದೊಂದು ಕಾರ್ಯವು ವಹಿಸಲ್ಪಡುತ್ತದೆ. ಭೂಸುರರು ಯಜ್ಞ ಪ್ರಾರಂಭಿಸುತ್ತಾರೆ. ದೇವತೆಗಳು ಹವಿರ್ಭಾಗಕ್ಕಾಗಿ ಮುತ್ತುತ್ತಾರೆ.

'ಅಗ್ರಪೂಜೆಗೆ ಅರ್ಹರಾದ ಭೂಪಾಲರಾರು' ಎಂದು ಧರ್ಮನು ಪಿತಾಮಹ ಭೀಷ್ಮರನ್ನು ಕೇಳುತ್ತಾನೆ. ಅದಕ್ಕೆ ಗಾಂಗೇಯನು 'ಜಗದಲಿ ಕೃಷ್ಣನಲ್ಲದೆ ಮಾನನೀಯರದಾರು ಪೂಜ್ಯತಮರು?' ಎಂದು ಪ್ರಶ್ನಿಸುತ್ತಾನೆ. 'ದೇವಾಸುರ ನರೋರಗ ನಿಕರದಲಿ ನಾರಾಯಣನೆ ಮಿಗಿಲು. ಸಂಶಯವೇಕೆ? ಕೃಷ್ಣನ ಚರಣವ ತೊಳೆ' ಎಂದು ಸಲಹೆ ಕೊಡುತ್ತಾನೆ. ಧರ್ಮರಾಜನು ಪೂಜಾದ್ರವ್ಯಗಳನ್ನು ತರಿಸುತ್ತಾನೆ. ಅಷ್ಟರಲ್ಲಿ ಶಿಶುಪಾಲನಿಗೆ ಅಸಮಾಧಾನವು ಭುಗಿಲೆಂದು ಉರಿದೇಳುತ್ತದೆ. ಇದನ್ನು ಸಹಿಸದೆ 'ಇದು ಮಹಾಧ್ವರವು. ಇಲ್ಲಿ ನೆರೆದಿದ್ದುದು ಮಹಾಕ್ಷತ್ರಿಯರು. ಗೋವರ ಸದೆಗನಿಲ್ಲಿಗೆ ಶ್ರೇಷ್ಠನೇ?' ಎಂದು ಪ್ರಶ್ನಿಸುತ್ತಾನೆ. ಯೋಗ್ಯರಾದ ಹಲವರ ಹೆಸರನ್ನು ಎತ್ತಿಹೇಳಿ ಕೃಷ್ಣನಿಗೆ ಅಗ್ರಪೂಜೆ ಸಲ್ಲದೆಂದು ಆಗ್ರಹ ತಾಳುತ್ತಾನೆ. ಕೃಷ್ಣನನ್ನು ಬಹುಬಗೆಯಲ್ಲಿ ನಿಂದಿಸುತ್ತಾನೆ. ಆಗ ಭೀಷ್ಮನು ಎದ್ದು ಅಗ್ರಪೂಜೆಗೆ ಸರ್ವ ವಿಧದಲ್ಲಿಯೂ ಶ್ರೀಕೃಷ್ಣನೇ ಪೂಜ್ಯನೆಂದು ಸಾರಿ, ಶ್ರೀ ಕೃಷ್ಣನ ಪರಮಲೀಲಾ ಲಲಿತ ಚರಿತವನ್ನು ಸಭೆಯಲ್ಲಿ ಸಾರುತ್ತಾನೆ.

ಕವಿ ಕುಮಾರವ್ಯಾಸನು ದಣಿವಿಲ್ಲದೆ ಅರವತ್ತು ಪದ್ಯಗಳಲ್ಲಿ ಶ್ರೀ ಕೃಷ್ಣ ಮಹಿಮೆಯನ್ನು ಭೀಷ್ಮರಿಂದ ಹೇಳಿಸಿದ್ದಾನೆ. ಪಂಪ ಕವಿ ಮಾತ್ರ ಒಂದೇ ಒಂದು ಪದ್ಯದಲ್ಲಿ ಹೊಗಳಿ ತೃಪ್ತನಾಗಿದ್ದಾನೆ ಇದೇ ಸಂದರ್ಭದಲ್ಲಿ. ಪರಮಭಾಗವತನಾದ ಕವಿಗೆ ಇದು ಸುಸಂಧಿ. ಕೃಷ್ಣ ಚರಿತವನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ, ದಣಿವಿಲ್ಲ. ಹೊಗಳಿದಷ್ಟೂ ಕವಿಯ ಭಕ್ತ್ಯುತ್ಸಾಹ ಪುಟದೇಳುತ್ತದೆ. ಹರ್ಷರೋಮಾಂಚನವಾಗುತ್ತದೆ. ಇತರರಿಗೆ ಈ ವರ್ಣನೆ ಅತಿಯೆನಿಸಿದರೂ ಕುಮಾರವ್ಯಾಸನಿಗೆ ಇದು 'ಪದುಮನಾಭನ ಮಹಿಮೆ'ಯನ್ನು ಬಣ್ಣಿಸುವ ಸದವಕಾಶ ತಾನೆ!

ಭಕ್ತ ಕುಮಾರವ್ಯಾಸನಿಗೆ ಭೀಷ್ಮರುಗೈದ ಪರಮಾತ್ಮಸ್ತುತಿ ಪ್ರಶಂಸೆ ಅರ್ಥಪೂರ್ಣವಾದುದು; ಪ್ರತಿಯೊಂದು ಶಬ್ದವೂ ಅನುಭವವೇದ್ಯವು. ಪರಮಾತ್ಮನ ನಿಜರೂಪವನ್ನು ಅಂತಶ್ಚಕ್ಷುಗಳಿಂದ ಕಣ್ಣಾರೆ ಕಂಡು ಪುಳಕಿತನಾಗಿರಬೇಕು ಕವಿ. ಅಂತೆಯೇ ಮನದುಂಬಿ ಇಂತು ವರ್ಣಿಸುತ್ತಾನೆ.

ಈತ ಚೈತನ್ಯಾತ್ಮ ನಿರ್ಗುಣ
ನೀತ ಗುಣಸಂಯೋಗಿ ಸರ್ವಗ
ನೀತ ಚಿನ್ನಯನೀತನಾ ಹರಿಯು......
ಭೂತ ಭವ್ಯ ಭವತ್ಪ್ರಧಾನ
ಖ್ಯಾತ ತತ್ವ ಪ್ರಕೃತಿ ಪೂರುಷ
ನೀತ ಸಚ್ಚಿನ್ಮಾತ್ರನೀತನು ಪರಶಿವಾತ್ಮಕನು ।
ಸೋತ ನುಡಿಮನದೊಡನೆ ಮರಳಿದ
ಡಾತ ಸತ್ಯಜ್ಞಾನಮಯ ನಿ
ರ್ಧೂತ ಮಾಯಾತೀತನು ಈ+ಹರಿಯು...........॥

ವಿಶ್ವಶಿಲ್ಪದ ಕುಶಲ ಹಸ್ತನು
ವಿಶ್ವರಕ್ಷೆಯ ಮಂತ್ರವಾದಿಯು
ವಿಶ್ವ ಸಮಿಧೆಗಳಗ್ನಿಕಾರ್ಯದ ಬ್ರಹ್ಮಚಾರಿ ವಟು
ವಿಶ್ವನಾಟಕ ಸೂತ್ರಧಾರನು
ವಿಶ್ವ ವಿಸ್ಮಯದೈಂದ್ರಜಾಲಕ
ವಿಶ್ವದಂತಸ್ಯೂತ ಚೇತನನೀತ......||

ಹೀಗೆ ಕುಮಾರವ್ಯಾಸನು ಅಗ್ರಪೂಜಾ ಪ್ರಸಂಗದ ನೆಪಮಾಡಿ ಕೊಂಡು ಪರಮಾತ್ಮನನ್ನು ಹೊಗಳಿ ಹಾಡುತ್ತಾನೆ.

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ
ಆದಾವಂತೇಚ ಮಧ್ಯೇಚ ವಿಷ್ಣುಃ ಸರ್ವತ್ರಗೀಯತೇ ||

ಎಂಬುದು ಮಹಾಭಾರತವಾಕ್ಯವು. ಶ್ರೀಹರಿಯೇ ಮುಖ್ಯ ವೃತ್ತಿಯಿಂದ ಮಹಾಭಾರತದಲ್ಲಿ ಪ್ರತಿಪಾದಿಸಲ್ಪಡುತ್ತಾನೆಂಬುದು ವ್ಯಾಸಮಹರ್ಷಿಗಳ ಅಭಿಪ್ರಾಯ ಸಾರವು. ಕಾರಣ ಭಾಗವತಾಗ್ರೇಸರನಾದ ಕುಮಾರವ್ಯಾಸನು ಸಂದರ್ಭ ಒದಗಿದಾಗಲೆಲ್ಲ ಮುಕ್ತ ಕಂಠದಿಂದ ಶ್ರೀಕೃಷ್ಣನ ಗುಣಗಾನಗೈದು ತೃಪ್ತನಾಗುತ್ತಾನೆ. ಭಕ್ತರಾದ ಪಾಂಡವರ ಕಥೆಯು ಕೂಡ ಮುಖ್ಯತಃ ಹರಿಯ ಮಹಿಮೆಯನ್ನು ಹೇಳುವದರಿಂದಲೇ ಕವಿಗೆ ಅದು ಪ್ರಿಯವು.

ಒಲಿದವರನುಜ್ಜೀವಿಸುವ ಬಲು ದೈವ

ಪಂಪಮಹಾಕವಿಯು ಕೂಡ ಶ್ರೀಕೃಷ್ಣನ ಮಹತಿಯನ್ನು ಅರಿತಿದ್ದಾನೆ. ತನ್ನ ಕಾವ್ಯದಲ್ಲಿ ಅವನಿಗೆ ಸಲ್ಲಬೇಕಾದ ಸ್ಥಾನವನ್ನು ಕೊಟ್ಟಿದ್ದಾನೆ. ಮಹಾಕಾವ್ಯದ ದೃಷ್ಟಿಯಿಂದ ಮುಖ್ಯ

ಪಾತ್ರವನ್ನು ಮುಸುಕುಗೊಳಿಸದಂತೆ ಔಚಿತ್ಯವರಿತು ಕೃಷ್ಣನ ಪಾತ್ರವನ್ನು ಚಿತ್ರಿಸಿದ್ದಾನೆ. ಕೃಷ್ಣನ ಬಗೆಗೆ ಅನಾದರ ಅಸಡ್ಡೆ ಯಿಲ್ಲ ಪಂಪನಲ್ಲಿ, ಎಂಬುದು ಸುಸ್ಪಷ್ಟವು. ವ್ಯಾಸಮಹರ್ಷಿಗಳ ಭಾರತದಲ್ಲಿ ಯಾವ ಯಾವ ಪ್ರಸಂಗಗಳಲ್ಲಿ ಕೃಷ್ಣಮಹಿಮೆಯು ಮೂಡಿಬಂದಿದೆಯೋ ಆ ಅಭಿಪ್ರಾಯವನ್ನು ಅಲ್ಲಗಳೆಯದೆ ತನ್ನ ಕಾವ್ಯದಲ್ಲಿ ಸಂಕ್ಷಿಪ್ತವಾಗಿಯಾದರೂ ಅನುವಾದಿಸಿದ್ದಾನೆ. ಆದರೆ ಕೃಷ್ಣಭಕ್ತಿಯಿಂದ ಪ್ರೇರಿತನಾಗಿ ಕಾವ್ಯ ಬರೆದವನಲ್ಲ ಪಂಪಕವಿ. ಕೃಷ್ಣಮಹಿಮೆಯನ್ನು ವರ್ಣಿಸಲು ಕಾವ್ಯ ರಚಿಸಲೂ ಇಲ್ಲ. ಈ ಕಾರಣದಿಂದ ಕೃಷ್ಣನ ಭಕ್ತವಾತ್ಸಲ್ಯ, ಭಕ್ತಪರಾ ಧೀನತೆಗಳನ್ನು ಬಿಂಬಿಸುವ ಮಹತ್ವದ ಪ್ರಸಂಗಗಳನ್ನು ಕೈಬಿಟ್ಟಿ ದ್ದಾನೆ.

ಭಾಗವತನಾದ ಕುಮಾರವ್ಯಾಸನಿಗೆ ದೂರ್ವಾಸಾತಿಥ್ಯ, ದ್ರೌಪದೀ ವಸ್ತ್ರಾಪಹರಣದಂತಹ ಕಥಾ ಸನ್ನಿವೇಶಗಳು 'ಒಲಿದ ವರನುಜ್ಜೀವಿಸುವ' ಶ್ರೀಹರಿಯ ಶೀಲವನ್ನು ಚಿತ್ರಿಸುವಲ್ಲಿ ಉಪ ಯುಕ್ತವಾಗಿವೆ. 'ಹರಿಪರಾಯಣದೆಂದೊಡವರಿಗೆ ಹರಹಿಕೊಂಬ' ಪರಮಾತ್ಮನ ಸದಯಾಂತಃಕರಣ ವಾತ್ಸಲ್ಯಗಳನ್ನು ಕೊಂಡಾ ಡಲು ಬಳಸಿಕೊಂಡಿದ್ದಾನೆ. ಕವಿ ಭಕ್ತಿಭಾವದಿಂದ ಪರವಶನಾಗಿ ಕಥೆಯನ್ನು ನಿರೂಪಿಸುತ್ತಾನೆ ಇಂತಹ ಸನ್ನಿವೇಶಗಳಲ್ಲಿ.

ತಂದೆ ಬೇಡ+ ಎಮಗೆ+ ಅವ್ವೆ ಬೇಡ+ ಎಮ
ಗಿಂದುಮುಖಿಯರನ್ನೊಲ್ಲೆವಾವ್, ಮನ
ಸಂದು ಮೆಚ್ಚಿಹೆವೆಮ್ಮ ಭಕ್ತರಿಗೆ+ ಎಂಬನನವರತ ।

ಕೃಷ್ಣನ ತಂದೆ ವಸುದೇವನು ಧರ್ಮಾದಿಗಳೆದುರಿಗೆ ತನ್ನ ಮಗ ವಾಸುದೇವನನ್ನು ಕುರಿತು ಹೇಳುವ ಮಾತುಗಳಿವು. ಭಕ್ತರಿಗೆ

ತನ್ನ ಮನವನ್ನು ಮಾರಿಕೊಂಡ ಪರಮಾತ್ಮನ ಭಕ್ತವಾತ್ಸಲ್ಯಕ್ಕೆ ಬೇರಾವ ಪ್ರಬಲತಮ ಸಾಕ್ಷಿ ಬೇಕು! ತಂದೆ ತಾಯಿ ಹೆಂಡಿರು ಮಕ್ಕಳನ್ನು ಲಕ್ಷಿಸದೆ ಭಕ್ತರನ್ನು ಮೆಚ್ಚುವ ಪ್ರೀತಿಸುವ, ಅವರ ಸಹಾಯಕ್ಕೆ ಧಾವಿಸುವ ಕೃಷ್ಣನ ಪರಿಯನ್ನು ವರ್ಣಿಸುವ ವಸುದೇವನ ಮಾತಿನಲ್ಲಿ ತಂದೆ ತಾಯಿಗಳ ಮನೋಭಾವ ಮೂಡಿಬರುವದರೊಂದಿಗೆ ಪರಮಾತ್ಮನ ಗುಣಗಾನವೂ ಇದೆ.

ನೊಂದೆನೆಂಬೆನು ತನ್ನವರು ಮನ
ನೊಂದರಾದೊಡೆ, ತನ್ನವರ ಸುಖ
ವಿಂದು ತನ್ನದು ಎಂಬುದೇ ಸಿರಿಕೃಷ್ಣ ಮತ...

ಎಂಬುದನ್ನು ವಸುದೇವನು ಸ್ಪಷ್ಟಪಡಿಸುತ್ತಾನೆ. 'ತನಗಾಗದ ವರಿಗೆ ತನ್ನ ತೆರುವನು, ಕೊಲುವ ಹಗೆಗೆ ಒಲಿವ' ಮಹಾ ಕಾರುಣ್ಯಸಿಂಧುವಿನ ಬಗೆ ವಿಚಿತ್ರವಾದುದು, ಎಂದು ಹೇಳು ತ್ತಾನೆ. ಅಂದ ಮೇಲೆ ಧರ್ಮನಿಷ್ಠರೂ ತನ್ನ ಸದ್ಭಕ್ತರೂ ಆದ ಪಾಂಡವರಿಗೆ ಒಲಿದು ಬರುವದೇನು ಆಶ್ಚರ್ಯವು! 'ಆಳಿ ನೊಂದಪಮಾನ ಆಳ್ದಂಗೆ'ಂಬ ಮಾತು ಅವನಿಗೆ ತಿಳಿಯದೇ?

ಪಾಂಡವರ ಪರವಾಗಿ ಸಂಧಿ ವಿಗ್ರಹಿಯಾಗಿ ಕೌರವನ ಓಲಗಕ್ಕೆ ತೆರಳುತ್ತಾನೆ. ಕರ್ಣನಲ್ಲಿ ಜನ್ಮರಹಸ್ಯವನ್ನು ಅರುಹಿ ಭೇದಿಸುತ್ತಾನೆ. ಅರ್ಜುನನ ಬಂಡಿಯ ಬೋವನಾಗಿ 'ಭೃತ್ಯ ವರ್ಗದಲಿ ತನಗೆ ಅಹಂಕೃತಿಯಿಲ್ಲ'ವೆಂಬುದನ್ನು ತೋರುತ್ತಾನೆ. ಭೀಷ್ಮರ ಮೇಲೆ ಚಕ್ರವನ್ನೆತ್ತಿ ಭಕ್ತನ ಪ್ರತಿಜ್ಞೆಯನ್ನು ಪೂರ್ಣ

ಮಾಡುತ್ತಾನೆ. ಸೂರ್ಯಮಂಡಲಕ್ಕೆ ಚಕ್ರವನ್ನು ಹಿಡಿದು[೧] ಸೈಂಧವನ ವಧೆಗೆ ಕಾರಣನಾಗುತ್ತಾನೆ. ಸರ್ಪಾಸ್ತ್ರದಿಂದ ಅರ್ಜುನನ ತಲೆಗಾದು, ಬಳಿಕ ಕರ್ಣನನ್ನು ಕೊಲ್ಲಿಸುತ್ತಾನೆ. ಭೀಮನಲ್ಲಿ ಪ್ರಾಣನಾಗಿ ಸುಳಿದು[೨] ಬಲಗೊಳಿಸಿ ದುರ್ಯೋಧನನ ಊರುಭಂಗ ಮಾಡಿಸುತ್ತಾನೆ. ಅರ್ಜುನನನ್ನು ದೂರ ಒಯ್ದು ಅಭಿಮನ್ಯುವನ್ನು ಕೊಲಿಸಿದ[೩] ಸ್ವಾಮಿಯೇ ಅಶ್ವತ್ಥಾಮನ ಕುಶಿಕಾಸ್ತ್ರದಿಂದ ಉತ್ತರೆಯ ಗರ್ಭವನ್ನು ಉಳಿಸುತ್ತಾನೆ. ಶ್ರೀಕೃಷ್ಣನ ವ್ಯಾಪಾರವು ಅಚಿಂತ್ಯಾದ್ಭುತವು, ಅರಿವಿಗೆ ನಿಲುಕದ್ದು.

---

೧ ಸಲಿಸಬೇಹುದು ಭಕುತ ಮಾಡಿದ
ಛಲದ ಭಾಷೆಯನೆನುತ ರವಿಮಂ
ಡಲಕೆ ಮರೆಯೊಡ್ಡಿದನು ಮುರರಿಪು ವರ ಸುದರ್ಶನವ ।
(ದ್ರೋಣ ಪರ್ವ)

೨ ಅರಸ ಕೇಳಾಕ್ಷಣದೊಳನಿಲ
ಸ್ಮರಣೆಯನು ಹರಿ ಮಾಡಿದನು ಸಂ
ಚರಿಸಿದನು ತತ್ತನುಜನಂಗೋಪಾಂಗ ವೀಥಿಯಲಿ ।
(ಗದಾ ಪರ್ವ)

೩ ಫಲುಗುಣನ ಮಗನಿವನು ಬಲುಗೈ
ಯುಳುಹಬಾರದು. ಕಾಯಿದರೆ ಕಲಿಯುಗಕೆ ಗತಿಯಿಲ್ಲ ।
ಫಲುಗುಣನ ಸಾವಿತ್ತಲೊಯ್ದರೆ
ಬಳಿಕ ನಿರ್ಣಯವು......
(ದ್ರೋಣ ಪರ್ವ)

ಪ್ರಸ್ತುತ ಕನ್ನಡ ಕವಿಗಳಲ್ಲಿ ಕುಮಾರವ್ಯಾಸನು ಮಾತ್ರ ಚಿತ್ರಿಸಿದ ಇನ್ನೂ ಕೆಲವು ಸನ್ನಿವೇಶಗಳನ್ನು ಇಲ್ಲಿ ಅವಲೋಕಿಸಿ, ಅವನ ಭಾಗವತ ದೃಷ್ಟಿ ಅದೆಂತು ಅಲ್ಲೆಲ್ಲ ಮೂಡಿಬಂದಿದೆ ಯೆಂಬುದನ್ನು ನೋಡೋಣ.

ಗರುವೆಯು ಗಾಹಿಸಿತು ಗೋವಿಂದನಭಿಧಾನ

ಪಂಪಮಹಾಕವಿ ತನ್ನ ಭಾರತದಲ್ಲಿ ದ್ರೌಪದಿಯ ವಸ್ತ್ರಾಪ ಹರಣವನ್ನು ಸೂಚಿಸಿದ್ದಾನೆ* ಮಾತ್ರ. ಶ್ರೀಕೃಷ್ಣನ ಕೃಪೆ ಯಿಂದಾಗಿ ವಸ್ತ್ರ ಅಕ್ಷಯವಾದುದರ ಪ್ರಸ್ತಾಪವೇ ಇಲ್ಲ. ಹಾಗು ಈ ಅಕ್ಷಯಾಂಬರ ಪ್ರಸಂಗವು ಪ್ರಕ್ಷೇಪವೆಂಬ ವಾದವೂ ಉಂಟು. ಅದೇನೇ ಇರಲಿ, ವಸ್ತ್ರಾಪಹರಣ ಪ್ರಸಂಗವನ್ನು ಸ್ಪಷ್ಟ ವಾಗಿ ವರ್ಣಿಸದಿರುವದು ಅವನ ದೃಷ್ಟಿಯಲ್ಲಿ ಉಚಿತವೇ ಆಗಿದೆ. ದ್ರೌಪದಿಯು ಕೂಡ ಅರ್ಜುನನ ಮಹಿಷಿಯಷ್ಟೇ. ಅವಳ ವಸ್ತ್ರಾ ಪಹರಣದ ಬಣ್ಣನೆ ಚಳುಕ್ಯಾನ್ವಯ ಅರಿಕೇಸರಿಯ ಘನತೆಗೆ ಕುಂದೆಂದು ಬಗೆದಿರಲು ಸಾಕು. ದುಶ್ಶ್ಯಾಸನನು ಸೀರೆ ಸೆಳೆ ವಾಗ ತಲೆಬಾಗಿಸಿಕೊಂಡು ಕುಳಿತಿರುವ ಅರ್ಜುನನನ್ನು ಚಿತ್ರಿ ಸುವ ಬಗೆಯೆಂತು ಎಂಬ ಸಮಸ್ಯೆಯೂ ಅವನಿಗುಂಟಾಗಿರ ಬೇಕು.

ಕುಮಾರವ್ಯಾಸ ಕವಿ 'ಭಕುತರಿಗೆ ತನ್ನನು ತೆತ್ತು ಬದು ಕುವನೆಂಬ' ಶ್ರೀಕೃಷ್ಣನ ಪರಮ ವ್ರತವನ್ನು ಬಗೆಗಾಣಿಸಲು ಈ ಸನ್ನಿವೇಶವನ್ನು ಎತ್ತಿಕೊಂಡಿದ್ದಾನೆ. 'ಆಳಿನೊಂದಪಮಾನ

---

* ಉಟ್ಟುದುವರಂ ಕೆಯ್ದುಂದು ಕೃಷ್ಣೆಯಾ ಧಮ್ಮಿಲ್ಲವುಂ ತೆಗೆದಂ (ಪಂ. ಭಾ)

ಆಳ್ದಂಗೆ'ಂಬುದನ್ನು ಬಗೆದು ಹರಿಯು ಭಕ್ತರತ್ತ ಧಾವಿಸುವ ಪ್ರತ್ಯಕ್ಷ ನಿದರ್ಶನವಿಲ್ಲಿದೆ. ದ್ರೌಪದಿಯ ಪ್ರಾರ್ಥನೆಯ ಮೂಲಕ ಶ್ರೀಹರಿಯನ್ನು ಹೃದಯ ತುಂಬಿ ಹೊಗಳುವ, ಸ್ತುತಿಸುವ ಅವಕಾಶ ಅವನಿಗಿಲ್ಲಿ ದೊರೆತಿದೆ. ಇಂತಹ ಎಡೆಗಳಲ್ಲೆಲ್ಲ ಕವಿಯ ಭಕ್ತಿ ಪುಟದೇಳುತ್ತದೆ. ಅವನ ಅಂತಃಕರಣ ಪುಳಕಗೊಳ್ಳುತ್ತದೆ. ಕವಿಯ ಮೊರೆ ದ್ರೌಪದಿಯ ಮೊರೆಯಲ್ಲಿ ಮೇಳಗೊಳ್ಳುತ್ತದೆ. ದೇವ ಭಕ್ತರ ಮಧುರ ಸಂಬಂಧವನ್ನು ಜಗತ್ತಿಗೆ ಸಾರಲು, ಭಾಗವತ ಧರ್ಮದ ಮಹತಿಯನ್ನು ಘೋಷಿಸಲು ಕುಮಾರವ್ಯಾಸನು ಇಂಥ ಸನ್ನಿವೇಶಗಳನ್ನು ಹಿಗ್ಗಿ ಬಣ್ಣಿಸುತ್ತಾನೆ.

ದಾಸಶ್ರೇಷ್ಠರಾದ ಜಗನ್ನಾಥದಾಸರು 'ಕರುಣಾಸಂಧಿ'ಯಲ್ಲಿ ಭಕ್ತರವಸರಕ್ಕೆ ಭಗವಂತನು ಅದೆಂತು ಬಂದು ಒದಗುವನು ಎಂಬುದನ್ನು ಹೀಗೆ ವರ್ಣಿಸಿದ್ದಾರೆ–

ಕಣ್ಣೆಗೆವೆಯಂದದಲಿ, ಕೈಮೈ
ತಿಣ್ಣೆಗೊದಗುವ ತೆರದಿ, ಪಲ್ಗಳು
ಪಣ್ಣು ಫಲಗಳನಗಿದು ಜಿಹ್ವೆಗೆ ರಸವನೀವಂತೆ।
ಪುಣ್ಯ ಫಲವೀವಂದದಲಿ, ನುಡಿ
ವೆಣ್ಣೆನಾಣ್ಬಂಡದೊಳು ಲಕ್ಷ್ಮಣ
ನಣ್ಣನೊದಗುವ ಭಕ್ತರವಸರಕವುರಗಣ ಸಹಿತ॥

'ಸದ್ಭಕ್ತಿ ಪಾಶದಲ್ಲಿ ಕಟ್ಟುವರ ಭವಕಟ್ಟು ಬಿಡಿಸುವ; ಸಿಟ್ಟಿನವನಲ್ಲ, ಕಾಮದ ಕೊಟ್ಟು ಸಲಹುವನು ಸಕಲ ಸೌಖ್ಯವನು ಇಹಪರಂಗಳಲಿ' ಎಂದು ಹರಿಯ ಸ್ವಭಾವವನ್ನು ವರ್ಣಿಸಿದ್ದಾರೆ.

‘ಏನು ಕರುಣಾನಿಧಿಯೊ ಹರಿ ಮತ್ತೇನು ಭಕ್ತಾಧೀನನೋ’ ಎಂದು ಭಕ್ತಿ ಕಂಪಿತರಾಗಿ ಉದ್ಗರಿಸಿದ್ದಾರೆ.

ಭಕ್ತಾಧೀನ ಶ್ರೀಕೃಷ್ಣನು ದ್ರೌಪದಿಯ ಮೊರೆಗೆ ಓಗೊಟ್ಟು, ಅವಳ ಮಾನವನ್ನು ಕಾಯ್ದ ಬಗೆಯನ್ನು ಕುಮಾರ ವ್ಯಾಸನು ಅದೆಂತು ವರ್ಣಿಸಿದ್ದಾನೆಂಬುದನ್ನು ಈಗ ನೋಡುವ.

ಸೆಳೆವರಸುವನು ಖಳರು ಸೀರೆಯ
ಸುಲಿದರುಳಿಯೆನು ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದು+ಒರಲಿದಳು ತರಳೆ ।

ವೇದ ವಧುಗಳ ಕಾಯ್ದ, ರಕ್ಕಸರಿಂದ ಧಾತ್ರಿಯ ಕಾಯ್ದ, ರೇಣುಕೆಯನ್ನು ರಕ್ಷಿಸಿದ, ದೇವಕಿಯ ಸೆರೆಬಿಡಿಸಿದ ಕಮಲಾಕ್ಷ ನನ್ನು ಆರ್ತಳಾಗಿ ಪ್ರಾರ್ಥಿಸಿದಳು.‘ಒದೆದೊಡೆ ಒಲಿದವರುಂಟೆ, ಬೈದೊಡೆ ಪದವನಿತ್ತವರುಂಟೆ? ಹೆಂಗಸಿನ ಹೇರಾಳದ ಕೃಪಾ ಳುವೆ ಸಲಹು’ ಎಂದು ಬೇಡಿದಳು. ‘ಚರಣಭಜಕರ ಮಾನ ಹಾನಿಯ ಹರಿಬವಾರದು? ’ ಎಂದು ಪ್ರಶ್ನಿಸಿದಳು. ‘ನಾಥರಿಲ್ಲದ ಶಿಶುಗಳಿಗೆ ನೀ ನಾಥನೈ ಗೋವಿಂದ ಸಲಹೈ’ ಎಂದು ಆಲ್ಪೊರೆ ದಳು. ‘ಒಸೆದು ನಿನ್ನವರೆಂದು ಬಗೆವರೆ ಬಸಿದು ಬೀಳುವ ಕೃಪೆಯ ನೀ ತೋರಿಸೆ, ಇದೇನೈ! ’ ಎಂದು ಅಚ್ಚರಿಪಟ್ಟಳು. ‘ನೊಂದೆನೈ ನುಗ್ಗಾದೆನೈ ಗೋವಿಂದ ಕೃಪೆ ಮಾಡು’ ಎಂದು ಇಂದುಮುಖಿ ಹಲುಬಿದಳು.

ಅತ್ತ ದ್ವಾರಾವತಿಯಲ್ಲಿ ದೇವೋತ್ತಮನು ರುಕ್ಮಿಣಿ ಸತ್ಯ ಭಾಮೆಯರೊಡನೆ ನೆತ್ತವಾಡುತ್ತಿದ್ದನಂತೆ. ಸತಿಯ ಹುಯ್ಯಲು ಸರ್ವಜ್ಞನಿಗೆ ಕೇಳಿತು. ಲಕ್ಷ್ಮೀರಮಣನು ‘ಕೋಳುಹೋದವೆ ಪಾಂಡುಪುತ್ರರ ಬಾಳುವೆಗಳಕಟ!’ ಎಂದು ಚಿಂತಿಸಿದನು.

'ಕ್ರೂರ ದುರ್ಯೋಧನನು ದ್ರುಪದನ ಕುಮಾರಿ ಪಾಂಚಾಲಿಯನು ಸಭೆಯಲಿ ಸೀರೆಯನು ಸುಲಿಯಲ್ಕೆ ಕಾಯ್ಕೈ ಕೃಷ್ಣ ಎಂದೆನುತ ನಾರಿ ಒರಲುತ್ತಿರುವ' ಹದನವನ್ನು ರುಕ್ಮಿಣಿಗೆ ಹೇಳಿ, ಬಳಿಕ 'ಅಕ್ಷಯ ಸೀರೆಯಾಗಲಿ' ಎಂದು ಹರಸಿದನು.

ದ್ರೌಪದಿಯ ಸೀರೆ ಅಕ್ಷಯವಾಯಿತು.'ಸೆಳೆವ ಸೀರೆಗೆ ಲಯವ ಕಾಣೆನು.ಕರುಣವೆಂತುಟೊ ದೇವಕೀ ಸುತನ' ಎಂದು ವೈಶಂಪಾಯನ ಮುನಿಯ ಮೂಲಕ ಕುಮಾರವ್ಯಾಸನು ಹರ್ಷೋದ್ಗಾರ ತೆಗೆಯುತ್ತಾನೆ. ಸೀರೆಯೊಟ್ಟಲು ಗಗನವನು ಗಾಹಿಸಿತು ಬೆರಗಾದುದು ಮಹಾಸ್ಥಾನ. ಖಳನ ನಿಡುದೋಳುಗಳು ಬಳಲಿದವು.ಬುಧಸ್ತೋಮ'ಅಹಹ ದೈವಪ್ರೇಮವಿದೆಲಾ ಮಹಿಳೆಯಲಿ, ಮಾನವರ ಕೃತಿ ಗೆಲಬಹುದೆ, ಗರುವೆಯ ಗಾಹಿಸಿತು ಗೋವಿಂದನಭಿಧಾನ' ಎಂದು ನಲಿದುದು. ಭೀಷ್ಮಾದಿಗಳ ಕಂದಿದ ಮುಖ ಪ್ರಜ್ವಲಿಸಿತು. ಅವರಿಗಾದ ಸಂತೋಷವನ್ನು ಕವಿ ಕುಮಾರವ್ಯಾಸನು ಅಂದವಾಗಿ ಬಣ್ಣಿಸುವ ಬಗೆ ನೋಡಿರಿ–

ಬೆಗಡಿನಲಿ ಮುದ, ಖೇದನಯನಾಂ
ಬುಗಳೊಳು ಆನಂದಾಶ್ರು, ಶೋಕದ
ಬಗೆಯೊಳುಬ್ಬಿದ ನಗೆಯಲಾ, ಸ್ವೇದದಲಿ ರೋಮಾಂಚ।
ದುಗುಡದಲಿ ಪರಿತೋಷ, ಕಂದಿದ
ಮೊಗದಲುಜ್ವಲವೃತ್ತಿ, ಭೀಷ್ಮಾ
ದಿಗಳೊಳಗೆ ಪಲ್ಲಟಿಸುತಿರ್ದುದು ಪಡಿಮುಹೂರ್ತದಲಿ।

ಈ ಹಿಂದಿನ ಕಳವಳ ದುಃಖ ಅಳಿದು ಸಂತೋಷ ಸುಳಿದ ಬಗೆಯನ್ನು ಕವಿ ಕಮಾರವ್ಯಾಸನು ಮನಂಬುಗುವಂತೆ ಚಿತ್ರಿಸಿ

ದ್ದಾನೆ. ಆ ಕ್ಷಣದಲ್ಲಿ ಕವಿಯೂ ಅವರೆಲ್ಲರೊಂದಿಗೆ ನೋವು ನಲಿವುಗಳನ್ನು ಅನುಭವಿಸಿದ್ದಾನೆಂಬುದರಲ್ಲಿ ಸಂದೇಹವಿಲ್ಲ.

ಭಕ್ತರ ದೃಷ್ಟಿಯೊಂದಾದರೆ, ದುಷ್ಟರ ವಕ್ರನೋಟವೇ ಬೇರೆ. ಅದನ್ನು ಬಿಡದೆ ಕವಿ ಕಾಣಿಸಿದ್ದಾನೆ. ಸೀರೆ ಅಕ್ಷಯವಾಗಿ ಸೆಳೆವ ತಮ್ಮನ ತೋಳು ಬಳಲಿದುದನ್ನು ಕಂಡ ದುಃರ್ಯೋಧನನು–

ಈ ತತುಕ್ಷಣ ದೃಷ್ಟಿಬಂಧನ
ವೇತರಲಿ ಮಾಡಿದಳೊ ಲಜ್ಜಾ
ಜಾತವುಳಿದುದು, ಬೆಳೆದ ಸೀರೆಯು ಕಟ್ಟ ಹೊರಿಸು...

ಎಂದು ಲಜ್ಜೆಗೆಟ್ಟು ನುಡಿದನಂತೆ.

ಹೀಗೆ ಪರಮಾತ್ಮನ ನಾಮಸ್ಮರಣೆ ಮಾನಿನಿಯ ಮಾನವನ್ನು ಕಾಯ್ದ ಬಗೆಯನ್ನು ಬಣ್ಣಿಸಿ, 'ಪದುಮನಾಭನ ಮಹಿಮೆ'ಯನ್ನು ಬಿತ್ತರಿಸಿದ್ದಾನೆ ಭಾಗವತನಾದ ಕವಿ ಕುಮಾರವ್ಯಾಸ.

ದೂರ್ವಾಸಾತಿಥ್ಯ

ಷಡುರಸಾನ್ನದ ಆದರಣೆಯಿಂದ ಉಡುಗೊರೆಗಳಿಂದ ತುಷ್ಟಿಬಡಿಸಲು, ಎಂಬತ್ತೆಂಟು ಸಾವಿರ ಶಿಷ್ಯರೊಡಗೂಡಿ ಬಂದ ಕಡುಸುಖದ ಸನ್ಯಾಸಿವೇಷದ ಮೃಡನು ಮುದದಲಿ ಕೌರವನ ಮೈದಡವಿ 'ಮೆಚ್ಚಿದೆನು ಮಗನೆ, ಬೇಡು ಒಲಿದುದನು' ಎಂದನು. ದ್ವೇಷಾಸೂಯೆಗಳ ಕಣಿಯಾದ ಕೌರವನು 'ಪಾಂಡವರರಸಿ ಉಣಲೊಡನೆ, ಇರದೆ ಕವಳವ ಬೇಡಿ ಇನಿಬರೊಡವೆರಸಿ' ಎಂದು ಕೇಳಿಕೊಂಡನು. ಆಗಲೆಂದು ನುಡಿದು ದೂರ್ವಾಸ

ಮುನಿ ಹೊರಟನು. 'ಮುನಿಯುಗ್ರ ರೋಷದ ಸೆಗಳಿಕೆಗೆ ಪಾಂಡವರು ಸನಿತುತ್ತಾದರು' ಎಂದು ಗಾಂಗೇಯ ವಿದುರಾದಿಗಳು ದುಗುಡಕ್ಕೊಳಗಾದರು.

ಮರುದಿವಸ ಸತಿಯುಂಡ ಸಮಯವನರಿದು ಪಾಂಡವರ ಸನ್ನಿಧಿಗೆ ಮುನಿಪತಿ ಬಂದನು. ಧರ್ಮರಾಜನು ಸಾಷ್ಟಾಂಗವೆರಗಿ ಅರ್ಘ್ಯಪಾದ್ಯಗಳನ್ನಿತ್ತು ಸತ್ಕರಿಸಿದನು. ಆಗ ಮುನಿ 'ಸಾರೆಯಾಯ್ತು ಅಸ್ತ ಸಮಯ. ಉಧಾರವಹ್ನಿಯ ವಿವಿಧ ಪೀಡಾಕಾರಕೆ ಚಿಕಿತ್ಸೆಯುಂಟೆ? ' ಎಂದು ಕೇಳಿದನು. ಅದನ್ನು ಕೇಳಿ ಸಂತುಷ್ಟನಾದ ಯಮನಂದನನು 'ಆವ ಜನ್ಮದ ಸುಕೃತ ಸಂಭವಿಸಿದುದೊ, ನಿಮ್ಮ ಬರವನು ಅದಾವ ಪಡೆವನು! ಕೊಟ್ಟೆ' ಎಂದನು. ಆ ಬಳಿಕ ವಿಗಡಮುನಿ ಅನುಷ್ಠಾನಕೆ ನಡೆದನು. ಮುಂದಿನ ಸಿದ್ಧತೆಗಾಗಿ ನೃಪತಿ ದ್ರೌಪದಿಯನ್ನು ಕರೆಸಿದನು. ಅರಸಿಯಾರೋಗಿಸಿದ ಭಾವವ ಬರವಿನಲಿ ನೃಪನರಿದನು. ಅವನ ಹರುಷವಡಗಿತು, ಧೈರ್ಯ ಸುಕ್ಕಿತು, ಉಷ್ಣ ನಯನಾಂಬು, ಉರಿಹೊಡೆದ ಕೆಂದಾವರಿಯವೊಲ್ ಮುಖ ಕರಕುವಡೆದುದು.

ತುಡುಕಿ ಸುರಪನ ಸಿರಿಯ ಶರಧಿಯ
ಮಡುವಿನಲಿ ಹಾಯ್ಕಿದನು, ರೋಷವ
ಹಿಡಿದರೀಗಳೇ ಸುಟ್ಟು ಬೊಟ್ಟಿಡುವನು ಜಗತ್ರಯವ
ಮೃಡಮುನಿದು ಕೋಪಿಸಲಿ, ಶಾಪವ
ಕೊಡಲಿ, ನಾನದಕಂಜೆ. ಎನ್ನಯ
ನುಡಿಗನೃತ ಸಂಭವಿಸಿತಲಾ ! ಕೆಟ್ಟೆ ನಾನು......

ಎಂದು ಧರ್ಮರಾಜನು ಚಿಂತೋದಧಿಯಲ್ಲಿ ಮುಳುಗಿದನು. ಋಷಿಯು ಕೋಪ ಶಾಪಗಳಿಗಾಗಿ ಬೆದರಲಿಲ್ಲ ಯಮಸುತನು. ಕೊಟ್ಟ ಭಾಷೆಗೆ ತಪ್ಪಿದೆನೆಂಬ ಕಳವಳ ಅವನಿಗೆ. ಭೂಪತಿಯ ಚಿಂತೆಯ ಕಾರಣವನ್ನು ತಿಳಿದ ಧೌಮ್ಯಋಷಿ–

ನಾಮವನು ನಂಬಿದ ಮಹಾತ್ಮರ
ನಾಮವನು ನೆನೆದವರು ಪಡೆವರು
ಕಾಮಿತವನೆಲೆ ನಿಮ್ಮ ನೆಲೆ ನಿಮಗರಿಯ ಬಾರದೆಲೆ
ನಾವು ನಿಮ್ಮಲಿ ಕೃಪೆವಿಶೇಷವು
ಕಾಮಿನಿಗೆ ಕರಗುವನು ಕೃಷ್ಣನು
ಈ ಮಹಿಳೆ ಭಜಿಸುವದು ಬೇಗದಲಿ.........||

ಎಂದು ಸಲಹೆಯಿತ್ತನು. ದ್ರೌಪದಿ ಆಸುರದ ದುಃಖದಲಿ ಮುನಿಮಂತ್ರೋಪದೇಶದ ಬಲುಮೆಯಿಂದವೆ ಅಚ್ಯುತನ ನೆನೆದಳು:

ಶ್ರೀ ರಮಾವರ, ದೈತ್ಯಕುಲ ಸಂ
ಹಾರ, ಭಕ್ತಜನಾರ್ತಿ ಹರ, ಭವ
ದೂರ, ಸಕಲ ಚರಾಚರಾತ್ಮಕ, ದುಷ್ಟಕಂಸಹರ
ಚಾರುಗುಣ ಗಂಭೀರ, ಕರುಣಾ
ಕಾರ, ವಿಹಿತ ವಿಚಾರ, ಪಾರಾ
ವಾರ ಹರಿವ್ಮೆದೋರೆನುತ ಹಲುಬಿದಳು ಲಲಿತಾಂಗಿ||

ಅರಸುವೆನೆ ಪರಿಪೂರ್ಣ, ಕೇಳೆಂ
ದರುಹುವೆನೆ ಸರ್ವಜ್ಞ, ಸಾಕೆಂ
ದೊರಲಲಾರೆನು, ತಾಯಿ ನೀ ನಿಮಗಾವು ಶಿಶುಗಳೆಲೆ

ಕುರುಹುದೋರ್ಕೆ ಕೃಷ್ಣ ಕರುಣವ
ಕರೆದು ಕಳೆಯುಲು ಭಕುತರಾರ್ತಿಯು
ನರಿವ ವಿಪುಳ ಘುರಟ್ಟರಾರುಂಟೆಂದಳಿಂದುಮುಖಿ ||

ಇಂತು ಪರಿಪರಿಯಿಂದ ಆರ್ತಳಾಗಿ ಅನನ್ಯ ಭಕ್ತಿಯಿಂದೆ ಪ್ರಾರ್ಥಿಸಿದಳು. ಅವಳ ಕರೆ ಕರುಣಾಸಮುದ್ರನ ಕಿವಿಗೆ ತಾಕಿತು. ನಿಗಮಸ್ತವಕೆ ತಾನೆಡೆಗುಡದ ಮಹಿಮಾರ್ಣವನು ಯಾದವ ಶಿರೋಮಣಿ ಯುವತಿಯುಕ್ಕೆಯು ಸೈರಿಸದೆ ಸುಳಿದನು.

ಧ್ಯಾನಗೋಚರನಾಗಿ ವನಿತೆಯು
ಮಾನಿಸದಲಿಹ ಪರಮಹಂಸನು
ಮಾನುಷಾಕೃತಿಯಾಗಿ ತೋರಿದ ಬಾಹ್ಯ ರಚನೆಯಲಿ.

ಮಾನಿನಿಯ ನೈದಡಹಿ 'ಚಿಂತೆಯದೇನು ಲತಾಂಗಿ ಹೇಳೌ ತಂಗಿ?' ಎಂದು ಕೇಳಿದನು. ಕಂದೆರೆದು ಇಂದುಮುಖಿ ಕೃಷ್ಣನನು ಕಂಡು ಉಬ್ಬಿದಳು ಹರುಷದಲಿ, ದುಗುಡದ ಕೊಬ್ಬು ಮುರಿದುದು. ಪುಳಕವಾರಿಯೊಳೊಬ್ಬುಳಿಯೊಳು ಒಡೆಹಾಯ್ದು ನಿಂದವು ನಯನವಾರಿಗಳು. ಕಾಯುವ ನಿಬ್ಬರದಲೀಡಾಡಿದಳು ಹರಿಪದ ಪಯೋಜದಲಿ.

ಧರಣಿಯನು ಜಿಡದಳೆದು ಹೆಚ್ಚಿದ
ಚರಣವಿದು, ಸುರನದಿಯ ಸೃಜಿಸಿದ
ಚರಣವಿದು, ಕಲ್ಲಾದಹಲ್ಯಾ ಶಾಪನಿರುಹರಣ
ಚರಣವಿದು, ಕಾಳಿಂಗಮರ್ದನ
ಚರಣವಿದು, ಶಕಟಪ್ರಭಂಜನ
ಚರಣವಿದೆಲಾಯೆನುತ ಕೊಂಡಾಡಿದಳು ಹರಿಪದವ ||

ಆಗ ಕೃಷ್ಣನು 'ಏತಕೀ ಸ್ತುತಿ ತಂಗಿ? ಚಿತ್ತದೊಳಾತುರವಿದೇನು?' ಎನುತ ಮಸ್ತಕವ ಹಿಡಿದೆತ್ತಿದನು. ಒದಗಿದ ಸಂಕಟವನ್ನು ತೋಡಿಕೊಂಡಳು ಸ್ವಾಮಿಯೆದುರು.

ತೀರಿತಕ್ಷಯುದನ್ನವು ಇಂದು ಮ
ಹಾಋುಷಿಯು ಘನರೋಷವಹ್ನಿಗು
ಪಾರ ನಿನ್ನಯು ಪ್ಯೈದುನನ ತನುವೆಂದಳಿದುಂಮುಖಿ

ಸರ್ವಜ್ಞನಾದ, ನಿತ್ಯತೃಪ್ತನಾದ ಶ್ರೀಕೃಷ್ಣನು 'ನಾವು ಹಸಿದು ಬಂದರೆ ಈ ಪರಿ ದೂರು ದೂರುವುದಾವುದುಚಿತವು?' ಎಂದು ವಿನೋದವಾಡಿದನು. ಅದಕ್ಕೆ ದ್ರುಪದನಂದನೆ-

ದೇವ ನಿಮ್ಮಯು ಹಸಿವು ಕಳೆವೊಡೆ
ಭಾವ ಶುದ್ಧಿಯು ಭಕುತಿ ಬೇಹುದು
ನಾವು ಚಂಚಲ ಚಿತ್ತರು........॥

ಎಂದಳು. ಅದಕ್ಕೆ ಹರಿಯು 'ತಂಗಿ ತಾರೌ ಪ್ರೀತಿವಿದರು ಒಲಿದಿತ್ತುದೇ ಕ್ಷುಧೆಗಮೃತ ಪುಂಜವದು' ಎಂದು ಹೇಳಿದನು. ಅಕ್ಷಯ ಪಾತ್ರೆಯಲ್ಲಿದ್ದ ಕಿಂಚಿತ್ಶಾಕ ಶೇಷವ ತಂದುಕೊಡಲು ಕೈಗೊಂಡು ಸವಿದನು. ತಣಿದು ತಲೆದೂಗಿದನು, ತೇಗಿದನು. 'ಹೃದಯ ಕ್ಷುಧೆಯನು ಖಂಡಿಸಿದೆಯಲಾ' ಎನುತ ಕೊಂಡಾಡಿದನು.

ಶ್ರೀಕೃಷ್ಣನು ಒಂದಗುಳ ಕೊಂಡರೆ ಅಖಿಲ ಜೀವಿಗಳ ಕ್ಷುಧೆ ಹಿಂಗಿತು. ಋುಷಿಗಳ ಹೊಟ್ಟೆಗಳು ಕೊರಳಿಗಡರಿದವು. ದೂರ್ವಾಸಮುನಿ ಹರಿಯ ಬರವನ್ನು ತನ್ನೊಳರಿದನು. 'ಬಂದನೇ ಗೋವಿಂದ! ಭಕುತರ ಬಂಧುವಲ್ಲಾ!' ಎಂದೆನುತ ಕೃಷ್ಣನನ್ನು ಕಾಣಲು ಪರ್ಣಶಾಲೆಗೆ ಬಂದನು. ಆಗ ಅಸುರ ಮರ್ದನನು ಇದಿರೆದ್ದು ಕಾಣಿಕೆಯ ಕೊಟ್ಟು ಎರಗಿ 'ಹೊ ಹೊ ಸ್ಥಾಣುವಿನ ಬರವು ಎತ್ತಣಿಂದಾಯ್ತು?' ಎಂದು ಪ್ರಶ್ನಿಸಿದನು. ಅದಕ್ಕೆ ಮೃಡಮುನಿ-

ಮಾಣು ಮಾಧವ, ನಿಲ್ಲು, ಮಾನವ
ನಾಣೆಯುದ ನಾಟಕದ ನುಡಿಯಿಂದು
ಜಾಣ ನೀನಹೆಯೆನುತ ಮುನಿ ಹಾಯ್ದಪ್ಪಿದನು ಹರಿಯು

ಶ್ರೀಕೃಷ್ಣನು ಮುನಿಯು ಮಾತಿಗೆ 'ಯತಿಗಳೈತರೆ ಗಾರುಹತ್ಯ ಪ್ರತತಿ ವಂದಿಸಬೇಹುದಾ ಪದ್ಧತಿಯು ತೋರುವ ಪಂಥವೈಸಲೆ' ಎಂದು ಸಮಾಧಾನ ಹೇಳುತ್ತಾನೆ. ಅಂಬುಜಾನನೆಯು ಬಂದು ವಂದಿಸಲು ಮುನಿಯು 'ಐದೆಯಾಗೆನುತ' ಹರಸಿದನು. 'ಕುರು ಕುಲದ ಬೇರನು ಕೊಯ್ವನು ಈ ಹರಿ, ಕಾವನೈ ನಿಮ್ಮೈವರನು. ವರ ರಾಜ್ಯಲಕುಮಿಯ ಕೈವಿಡಿವ ಸಂಕಲ್ಪ ಸಿದ್ಧಿಪುದು' ಎಂದು ಆಶೀರ್ವದಿಸಿದನು. ಯಮುಸೂನು ಆರೋಗಣೆಗೆ ಚಿತ್ತವಿಸೆಂದು ಬಿನ್ನವಿಸಲು–

ಬೇರು ನೀರುಂಡಾಗ ದಣಿಯುವೆ
ಭೂರುಹದ ಶಾಖೋಪ ಶಾಖೆಗ
ಳೋರಣೆಯು ನಿಜದೇಹವಂಗೋಪಾಂಗನೆಂದೆನಿಪ
ಶ್ರೀರಮಣ ಸಂತುಷ್ಟನಾದೊಡೆ
ಬೇರೆ ಭೋಜನವೆಮಗೆ ಬೇಹುದೆ
ಭೂರಮಣ ಕೇಳು.........॥

ಎಂದೆನ್ನುತ್ತ ತನ್ನ ಹಸಿವು ಹಿಂಗಿದುದನ್ನು ವ್ಯಕ್ತಪಡಿಸಿ, ತಾನು ಈ ರೀತಿಯಲ್ಲಿ ಪರೀಕ್ಷಿಸಲು ಬರಬೇಕಾದ ಪ್ರಸಂಗದ ಹಿನ್ನೆಲೆ ಯನ್ನು ವಿವರಿಸಿದನು–

ದುಷ್ಟ ಕೌರವ ನಮ್ಮನಟ್ಟಿದ ಧೂರ್ತವಿದ್ಯೆಯಲಿ।
ಕಷ್ಟವೇ ಕೈ ಗಟ್ಟಿತಲ್ಲದೆ
ಕೆಟ್ಟರೇ ಪಾಂಡವರು ಹರಿಪದ
ನಿಷ್ಠರನು ನಿಲುಕುವನೆ ದುರ್ಜನನೆಂದನಾ ಮುನಿಪ॥

ಈ ಕಥೆಯಲ್ಲಿ ಪಾಂಡವರ ಭಕ್ತಿ ಪಾರಮ್ಯತೆ, ಶಿಷ್ಟರಕ್ಷಕ ಪರಮಾತ್ಮನ ಅನನ್ಯ ಅಸಾಧಾರಣ ಅಂತಃಕರಣ ವಾತ್ಸಲ್ಯಗಳು ಸುವ್ಯಕ್ತವಾಗಿವೆ. ಕೌರವನೇನೋ ಕೇಡನ್ನು ಬಗೆದು ದೂರ್ವಾಸರನ್ನು ಕಳುಹಿದನು. ಮುನಿಪತಿಯೂ ಅವನ ಕೂಳಿನ ಹಂಗಿಗೆ ಒಳಗಾಗಿ ಮುನ್ನಡೆದು ಇರುಳು ಅನ್ನದ ಭಿಕ್ಷೆ ಬೇಡಿದನು. ಆದರೆ ಪರಮಾತ್ಮನ ಸಂಕಲ್ಪವೇ ಬೇರೆಯಾಗಿತ್ತು. ಅವನ ಸಂಕಲ್ಪದಂತೆ ಲೋಕವು ನಡೆವುದಲ್ಲದೆ ಜೀವಿಗಳು ಸ್ವತಂತ್ರರಲ್ಲವೆಂಬುದನ್ನು ಕವಿ ಸ್ಪಷ್ಟವಾಗಿ ಇಲ್ಲಿ ತೋರಿದ್ದಾನೆ. ಹರಿಪದನಿಷ್ಠರಿಗೆ ಪರಮಾತ್ಮನ ರಕ್ಷೆಯಿದೆಯೆಂಬುದನ್ನು ಈ ಕಥಾ ಪ್ರಸಂಗವು ಮನಂಬುಗುವಂತೆ ತಿಳಿಸುತ್ತದೆ. ದೂರ್ವಾಸ ಋಷಿ ಮಹಾಜ್ಞಾನಿಯಾಗಿದ್ದೂ ಹೀಗೇಕೆ ನಡೆದುಕೊಂಡನೆಂದು ಸಂದೇಹ ಬಾರದಿರದು. ಇಲ್ಲಿ ಮೃಡಮುನಿಯೂ ಪರಮಾತ್ಮನ ಸಂಕಲ್ಪಕ್ಕೆ ಬಾಗಿ ನಡೆಯುತ್ತಾನೆಂಬುದನ್ನು ತಿಳಿಯಬೇಕು. ಈ ದೂರ್ವಾಸ ಪ್ರಸಂಗದಿಂದಲೇ ಪಾಂಡವರ ಭಕ್ತಿ ಶ್ರೀಕೃಷ್ಣನ ಮಹಿಮೆಗಳು ಪ್ರಕಟವಾಗುತ್ತವೆ. ಪರಮಭಾಗವತ ಕುಮಾರ ವ್ಯಾಸನು ಈ ಸುಸಂದರ್ಭವನ್ನು ವ್ಯರ್ಥ ಹೋಗಗೊಡುವನೆಂತು? 'ಜಗವ ಹೂಡುವ ಮೇಣ್ ಚತುರ್ದಶ ಜಗದ ಜೀವರ ನೂಡಿಯುಣಿಸುವ' ಕೃಷ್ಣ ಒಂದಗುಳ ತಿಂದು ತಲೆದೂಗಿದುದು ತೇಗಿದುದು ಪರಮಾಶ್ಚರ್ಯವೇ ಸರಿ. ಪತ್ರ ಪುಷ್ಪ ಫಲ ತೋಯಗಳಿಗೆ ಒಲಿವ ಸ್ವಾಮಿಯು ಒಂದಗುಳಿಗೆ ಒಲಿದುದು, ಅವನು ದಯಾಸಮುದ್ರನೆಂಬುದನ್ನೇ ಎತ್ತಿ ತೋರುತ್ತದೆ. ಅವನುಂಡು ತೇಗಿದಾಗ ಅವನ ಒಡಲಲ್ಲಿರುವ ಚತುರ್ದಶ ಭುವನಗಳೂ

ತೃಪ್ತಿಗೊಳ್ಳುವಾಗ ದೂರ್ವಾಸ ಋಷಿ ಹಾಗು ಅವನ ಎಂಬತ್ತೆಂಟು ಸಾವಿರ ಶಿಷ್ಯವೃಂದದ ಹಸಿವೆ ಹಿಂಗಿದುದು ಏನಾಶ್ಚರ್ಯ! ಶ್ರೀರಮಣನ ಸಂತುಷ್ಟಿಯಲ್ಲಿ ಸಕಲ ಜೀವರಾಶಿಯ ಸಂತುಷ್ಟಿಯಡಗಿದೆಯೆಂಬುದನ್ನು ಈ ಆಖ್ಯಾನವು ಸಾರುತ್ತದೆ. ಪರಮಾತ್ಮನ ಈ ಸರ್ವಭೋಕ್ತೃತ್ವ ಸ್ವಾತಂತ್ರ್ಯವನ್ನು, ಜೀವರ ಪಾರತಂತ್ರ್ಯವನ್ನು, ವಿಶುದ್ಧ ಭಕ್ತಿಯನ್ನು ಹಾಗು ಅದರ ಮಹಿಮೆಯನ್ನು ಕುಮಾರವ್ಯಾಸಕವಿ ಈ ಕಥೆಯ ಮೂಲಕ ಪರಿಣಾಮಕಾರಿಯಾಗಿ ಬಿಂಬಿಸಿದ್ದಾನೆ.

ಜಗದೊಳಾನೇ ಚರಿಸುವೆನು ತಿ
ಜ್ಜಗವಿದೆಲ್ಲವು ನನ್ನ ಮಾಯೆಯೊ
ಳೊಗೆದು ತೋರಿಸಿ ಸುಳಿಸೆ ಸುಳಿವುದು ಹಿಡಿಯಲಡಗುವದು॥

ಎಂದು ಹೇಳಿದ ಶ್ರೀಕೃಷ್ಣನ ಮಾತಿನ ಪ್ರತ್ಯಕ್ಷಾನುಭವ ಇಲ್ಲಿದೆ.

ನಿನ್ನಯ ಭಾಷೆ ತನ್ನದು

ಭಕ್ತರ ಭಾಷೆಯನ್ನು ತನ್ನದೆಂದೇ ಈಡೇರಿಸುವ ಶ್ರೀಕೃಷ್ಣನ ಪರಿಯನ್ನು ಅರಣ್ಯ ಪರ್ವದಲ್ಲಿ ತುಂಬ ಸುಂದರವಾಗಿ ಕವಿ ಚಿತ್ರಿಸಿದ್ದಾನೆ. ಪಾಂಡವರು ಕಾಮ್ಯಕವನದಲ್ಲಿರುವದನ್ನು ಕೇಳಿ ಕೃಷ್ಣನು ದ್ವಾರಕಾಪುರದಿಂದ ಅಲ್ಲಿಗೆ ಬರುತ್ತಾನೆ. ಉಚಿತ ಸತ್ಕಾರವನು ಮಾಡಿ ಮುರಾರಿಯಂಘ್ರಿಯನು ಅವಿರಳಾಶ್ರುಗಳಿಂದ ಪಾಂಡವರು ನಾದಿದರು. ದ್ರೌಪದಿಯು ಬಂದು ಹರಿಚರಣದಲ್ಲಿ ಹೊರಳಿದಳು, ಕರಗಿದಳು, ಕಂದಿದಳು ಮುಮ್ಮಲ ಮರುಗಿ ಕರುಗಂದಿದಳು. ಕೃಷ್ಣೆಯ ಸ್ತುತಿಯಿಂದ ಸಂಪ್ರೀತನಾದ ಶ್ರೀ ಕೃಷ್ಣನು ಅವಳನ್ನು ಸಂತೈಸಲು–

ಮುಡಿಯ ಸಂವರಿಸಬಲೆ, ಸೀರೆಯ
ನುಡು ನವಾಂಬರವಿದೆ, ವಿರೋಧವ
ಬಿಡು, ಸುಯೋಧನ ರಾಜಸಂತತಿ ಉರಿದುದು+ಇನ್ನೇನು॥

ಎಂದು ಹೇಳುತ್ತಾನೆ. ದ್ರೌಪದಿಯ ಅಪಮಾನದುರಿಯ ಝಳ ಅವನಿಗೇನು ತಾಕಿರದೇ ? ಬೇಕೆಂತಲೆ ಈ ಮಾತು ಹೇಳುತ್ತಾನೆ. ಅದಕ್ಕೆ ದ್ರೌಪದಿಯು–

ತುರುಬು ಕಟ್ಟುವ ಹದನ ನಿಮ್ಮಡಿ
ಅರಿಯದೆಂಬೆನೆ, ಸಕಲ ಸಚರಾ
ಚರದ ಚೇತನರೂಪ, ದೇಹಿ, ನಿಕಾಯ, ಕೃತಸಾಕ್ಷಿ
ತರಿದು ದುಶ್ಶಾಸನನ ವಕ್ಷದೊ
ಳೊರೆವ ರಕುತದೊಳದ್ದಿ ಕಟ್ಟುವ
ತುರುಬನರಿಯಾ ಕೃಷ್ಣಯೆಂದಳು ಕಮಲಮುಖಿ ನಗುತ ॥

ಸಕಲ ಚರಾಚರದ ಚೇತನ ರೂಪನಾಗಿಯೂ ಮಾನವನಂತೆ ಕಪಟ ನಾಟಕವಾಡುವ ಶ್ರೀಕೃಷ್ಣನಿಗೆ ಕೃಷ್ಣೆಯು ಕೊಟ್ಟ ಉತ್ತರ ಅರ್ಥವತ್ತಾಗಿದೆ. ದೇವನ ಲೀಲೆಗೆ ಕೋಪವಿಲ್ಲ; ನಗೆ ಸುಳಿಯುತ್ತದೆ ಅವಳ ಮುಖದಲ್ಲಿ. ದ್ರುಪದನಂದನೆಯ ಇಂಗಿತವನ್ನರಿತು ಶ್ರೀಕೃಷ್ಣನು ಇಂತು ಭರವಸೆ ಕೊಡುತ್ತಾನೆ–

ದೂಸಕನ ರಕ್ತದಲಿ ನಿನ್ನಯ
ಕೇಶವನು ಕಟ್ಟಿಸುವೆ, ನಿನ್ನಯ
ಭಾಷೆ ತನ್ನದು, ತಾಯೆ ತವಕಿಸಬೇಡ ನೀನೆಂದ

'ನಿನ್ನನು ಕೆರಳಿಚಿದರೆ ಕುನ್ನಿಗಳು?' ಎಂದು ತನ್ನ ಸಂತಾಪವನ್ನು ಸೂಚಿಸಿ, 'ಜೂಜಿನಲಿ ತಾನಿರಲಿಲ್ಲ; ಏನು ಮಾಡು

ವದು!' ಎನ್ನುತ್ತಾನೆ. ಮುರಾರಿಯ ಈ ಬಗೆಯ ಮಾತಿಗೆ ದ್ರೌಪದಿಗೆ ನಗೆ ಬರುತ್ತದೆ.

ಸಕಲ ಜೀವರ ಕರ್ಣಸಾಕ್ಷಿ
ಪ್ರಕರ ಚೈತನ್ಯ ಸ್ವರೂಪಾ
ತ್ಮಕನು ನೀನು+ಅಲ್ಲಿಲ್ಲ; ಹುಸಿಯಲ್ಲ!+ಎಂದಳಿಂದುಮುಖಿ ||

ಕೃಷ್ಣನು ತಾನು ಸಾಲ್ವನ ಪಟ್ಟಣಕ್ಕೆ ಲಗ್ಗೆಹಾಕಿ ಅವರನ್ನು ಸಂಹರಿಸಿದುದಾಗಿ ಹೇಳಿ–

ಅತ್ತಲಾ ಕೋಳಾಹಳದಲಿರ
ಲಿತ್ತಲಾದುದು ಜೂಜು, ನಿಮ್ಮ ವಿ
ಪತ್ತು ಕಂಡುದು............

ಎಂದು ತನ್ನ ಅಸಹಾಯತೆಯನ್ನು ಸಾಮಾನ್ಯರಂತೆ ವ್ಯಕ್ತ ಮಾಡುತ್ತಾನೆ, ನರರಲ್ಲಿ ನರನಾಗಿ. ಈ ಹರಿಯ ಆಟವನ್ನು ಕಂಡು ಭಕ್ತೆಯಾದ ದ್ರೌಪದಿಯು–

ಮಗನ ಕರೆದರೆ ಯಮನ ದೂತರ
ತಗುಳುವಂದು ಸಮೀಪವರ್ತಿಯೆ ?
ನಗಧರ ಶ್ರೀಕಾಂತ ಸಲಹೆನೆ ಮುನಿಕುಮಾರಕನ
ಉಗುಳಿಚಿದೆಯಾ ಮೃತ್ಯುವಿನ ತಾ
ಳಿಗೆಯೊಳಂದು ಸಮೀಪವರ್ತಿಯೆ ?
ಜಗದುದರ ನೀ ಜಾಣನಹೆಯೆಂದಳು ಸರೋಜಮುಖಿ ||

ದ್ರೌಪದಿಯ ಮಾತಿನಲ್ಲಿ ಲೌಕಿಕರಿಗೆ ಕೊಂಕಿದೆ. ಜ್ಞಾನಿಗಳಿಗೆ ಬ್ರಹ್ಮಜ್ಞಾನದ ಸುಳಿವಿದೆ. ಶ್ರೀಕೃಷ್ಣನು ಭಕ್ತಳ ಆರ್ತತೆಗೆ ಒಲಿದು ಭಕ್ತಿಗೆ ಬಾಗಿ–

ವಾಯುತನುಜನ ಕೈಯಲೇ ನೀ
ನ್ನಾಯತಿಕೆಯಹುದಾ ಪ್ರತಿಜ್ಞೆಗೆ
ತಾಯೆ ತಾ ಹೊಣೆಯೆಂದು ಕೊಟ್ಟನು ಸತಿಗೆ ನಂಬುಗೆಯ ॥

ಎಂದು ಸತಿಗೆ ನಂಬುಗೆ ಕೊಡುತ್ತಾನೆ.

ಮುಂದೆ ಸಂಧಿಗೆ ತೆರಳುವಾಗ ದ್ರೌಪದಿಯು ರಾಜೀವ ನಾಭನ ಹೊರೆಗೆ ಬಂದು ಅಂಘ್ರಿಕಮಲದಲಿ ನೊಸಲ ಚಾಚಿ 'ತನ್ನವರು ಪತಿಗಳೆ, ಪರಮವೈರಿಗಳು. ಹಳಿವ ನೀನೇ ಬಲ್ಲೆ, ಇನ್ನು ಎನ್ನುಳಿವ ನೀನೇ ಬಲ್ಲೆ' ಎಂದು ಕಂಬನಿದುಂಬಿ ತನ್ನಳಲ ತೋಡಿಕೊಂಡಳು. ಆಗ–

ಕಾಳಗವನೇ ಬಲಿದು ತಹೆನಿವ
ರೇಳಿಲವ ಮಾಡಿದೊಡೆ ರಿಪುಗಳ
ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯಲಿ ॥

ಎಂದು ಕೃಷ್ಣನು ಆಶ್ವಾಸನವೀಯುತ್ತಾನೆ. ಅವಳಿಗೆ ನಂಬಿಗೆ ಯಾಗಲೆಂದು–

ದೇವಕಿಯ ಮೇಲಾಣೆ, ವರವಸು
ದೇವನಂಘ್ರಿಗಳಾಣೆ, ಮನುಮಥ
ದೇವನಾಣೆ, ನಿಧಾನವನು ಕೇಳಬಲೆ ನಿನ್ನಾಣೆ ॥
ನಾವು ಸಂಧಿಯ ನೆವದಲವದಿರ
ಭಾವವನು ಕಲಿಮಾಡಿ ಕೋಪವ
ತೀವಿ ಸಂಧಿಯ ಮುರಿದು ಬಹೆವಿದ ನಂಬು ನೀ...॥

ಎಂದು ಆಣೆಯಿಡುತ್ತಾನೆ.

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ॥

—ಗೀತಾ

ಎಂಬುದು ಭಗವಂತನ ಅಭಯುವಷ್ಟೇ. ಇದಕ್ಕೆ ದೃಷ್ಟಾಂತ ವಾಗಿಯೇ 'ಮಹಾಭಾರತ'ವು ಇದೆ. ಭಾಗವತನು ಇದನ್ನು ತಿಳಿದೇ ತನ್ನನ್ನು ಪರಮಾತ್ಮನಿಗೆ ಅರ್ಪಿಸಿಕೊಳ್ಳುತ್ತಾನೆ. ತನ್ನ ಯೋಗಕ್ಷೇಮಗಳನ್ನು ಪರಮಾತ್ಮನು ನೋಡಿಕೊಳ್ಳುವನೆಂಬ ಸಂಪೂರ್ಣ ವಿಶ್ವಾಸವು ಅವನಿಗಿರುತ್ತದೆ. ಅದರಿಂದ ಅವನಿಗೆ ಬೇರೆ ಚಿಂತೆಯಿಲ್ಲ.

> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
> ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ||
>
> —ಗೀತಾ

ಎಂದು ಸಾರಿದಂತೆ ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸು ವದೇ ಹರಿಯ ಅವತಾರದ ಉದ್ದೇಶವು. ಧರ್ಮ ಸಂಸ್ಥಾಪನೆ ಯೆಂದರೂ ಒಂದೇ, ಧರ್ಮನ ರಾಜ್ಯಸ್ಥಾಪನೆಯೆಂದರೂ ಒಂದೇ. 'ಯತೋ ಧರ್ಮಃ ತತೋ ಜಯಃ' ಎಂಬುದಕ್ಕಾಗಿಯೇ ಪಾಂಡವರಿಗೆ ಗೆಲವು. 'ಸತ್ಯಮೇವ ಜಯತೇ' ಎಂಬುವದನ್ನು ಸಾರುವದಕ್ಕಾಗಿಯೇ ಈ 'ಮಹಾಭಾರತ'ವನ್ನು ವ್ಯಾಸಮಹರ್ಷಿ ಗಳು ರಚಿಸಿದರು. ಪ್ರಾಚೀನ ಆಚಾರ್ಯರಿಗೆ ಮಹಾಭಾರತವು ಇತಿಹಾಸವೆನಿಸಿದರೆ, ಭಕ್ತ ಪ್ರಕೃತಿಯ ಕುಮಾರವ್ಯಾಸನಿಗೆ ಅದು ಕೃಷ್ಣ ಚರಿತಾಮೃತವಾಯಿತು.

ಒಕ್ಕುಡಿತೆ ಹಾಲಲಿ ಹಸಿವ ನೂಕಿದನು

ಸಂಧಿಗಾಗಿ ಕೃಷ್ಣನು ಹಸ್ತಿನಾವತಿಗೆ ಆಗಮಿಸಿದನಷ್ಟೇ. ಶಿಷ್ಟಾಚಾರಕ್ಕನುಗುಣವಾಗಿ ಧೃತರಾಷ್ಟ್ರ, ಗಾಂಧಾರಿಯರನ್ನು ಕಂಡನು. ದ್ರೋಣ ಭೀಷ್ಮರನ್ನು ಬೀಳ್ಕೊಂಡು, ವಿದುರನಿಗೆ

ಮನೆಗೆ ಬರುವದಾಗಿ ಹೇಳಿ ಕಳುಹಿದನು. ಕೌರವನು ಹರಿಯು ತನ್ನರಮನೆಗೆ ಐತರುವನೆಂದು ಅಖಿಳ ವಿಧದಲಿ ಸಾರವಸ್ತುವ ತರಿಸಿ ಆರೋಗಣೆಗೆ ಮಾಡಿಸಿದನು. ರಾಯನ ಮಡದಿಯರು ಹೊಂಗಳಸ ಜಲವನು ಪಡಿಗವನ್ನು ಹಿಡಿದು ಅಸುರರಿಪುವಿನ ಬರವ ಹಾರಿದರು. ಗಾಂಗೇಯ ಗುರುಕೃಪ ಇನಸುತಾದಿಗಳು ಅಸುರರಿಪು ತಮ್ಮ ಮನೆಗಳಿಗೆ ಬರುವನೆಂದು ಸಾರವಸ್ತುಗಳ ಸವೆದರು. ಎಲ್ಲಿಯೂ ನಿಲ್ಲದೆ ಕೃಷ್ಣನು ವರಭಾಗವತಮಸ್ತಕ-ರತ್ನ ವಿದುರನ ಮನೆಗೆ ನಡೆತಂದನು.

ತನ್ನ ಮನೆಗೆ ಬರುತ್ತಿರುವ ಸ್ವಾಮಿಯನ್ನು ಕಂಡು ವಿದುರನ ಕರಣ ನಿರ್ಮಳವಾಯ್ತು, ಮನವು ಉಬ್ಬರಿಸಿತು, ಅತಿ ಪರಿತೋಷದೇಳಿಗೆ ಪರಮ ಸುಖದಲಿ ತನುವ ಮರೆದನು. ನಯನದಲ್ಲಿ ಹರ್ಷ ಜಲ ಹೊಮ್ಮಿದವು. ಎರಡುತೋರದ ಗಾಢ ಭಕ್ತಿಯ ಭರದ ಲವಲವಿಕೆಯಲಿ ಅಚ್ಯುತನ ಕಂಡನು. ಗರುವ ದೇವನ ಬರವ ಬಾಗಿಲಲಿ ಕಂಡನು, ಭಾಗವತೋತ್ತಮನಾದ ವಿದುರನು.

ತನುವ ಮರೆದನು, ಪುಳಕ ಜಲದಲಿ
ನನೆದು, ನಾರಾಯಣನ ಪದ ದರು
ಶನದ ಹರುಷಾರಣ್ಯದಲಿ ಮನ ಹೊಲಬುದಪ್ಪಿದನು
ನೆನೆವ ಸನಕಾದಿಗಳಿಗೊನ್ಮೆಯು
ಮನಗೊಡದ ಮಹಿಮಾವಲಂಬನು
ಮನೆಗೆ ಬಹ ಕರುಣಾಳುತನ ಹೊಸತೆಂದು ಹೊಂಗಿದನು.

'ಎಲೆಲೆ ಭಕುತರ ಭಾಗ್ಯಶಾಲಿಯ ಬೆಳೆಗಳಿವೆಲಾ' ಎಂದು ಹರಿಯ ಚರಣಕಮಲಗಳಲ್ಲಿ ಹರುಷದಿಂದ ಒಡಲನೀಡಾಡಿದನು.

ನೋಡಿದನು ಮನದಣಿಯೆ, ನಿಂಗೆ ಕೊಂ
ಡಾಡಿದನು, ಬೀದಿಯಲಿ ಹರಿದೆಡೆ
ಯಾಡಿದನು, ಭ್ರಮೆಯಾಯ್ತು ವಿದುರಂಗೆಂಬ ಗಾವಳಿಯ
ಕೂಡೆ ಕುಣಿದನು, ಮನೆಯ ಮುರಿದೀ
ಡಾಡಿದನು, ಮೈಮರೆದ ಹರುಷದ
ಗಾಡಿಕೆಯಲಿ+ಅಪ್ರತಿಮನೆಸೆದನು ಭಕುತಿ ಕೇಳಿಯಲಿ ||

ವಿದುರನ ಈ ಬಗೆಯ ಭಕ್ತಿ ಪರವಶತೆಯನ್ನು ಕಂಡು ಒಳಗೊಳಗೆ ಹರಿಯು ನಲಿದರೂ ಹೊರಗೆ ವಿನೋದವಾಗಿ ವಿದುರನನ್ನು ಕುರಿತು ಇಂತು ನುಡಿಯುತ್ತಾನೆ:

ಹಸಿದು ನಾವೈತಂದರೀ ಪರಿ
ಮಸಗಿ ಕುಣಿದಾಡಿದೊಡೆ ಮೇಣೀ
ವಸತಿಯನು ಸುಗಿದೆತ್ತಿ ಬಿಸುಟರೆ ತನಗೆ ತಣಿವಹುದೆ
ವಸುಮತಿಯ ವಲ್ಲಭರು ನಿಂಗೆ ಪ್ರಾ
ರ್ಥಿಸಿದೊಡೊಲ್ಲದೆ ಬಂದೆವೈ ನಾ
ಚಿಸದಿರೈ ಬಾ ವಿದುರಯೆನುತೊಳಹೊಕ್ಕನಸುರಾರಿ ||

ವಿದುರನಿಗೆ ಏನು ಮಾಡಬೇಕು, ಏನು ಮಾಡಬಾರದು ಎಂಬುದು ತಿಳಿಯದಾಯಿತು. ಮನಸ್ಸೆಲ್ಲ ಮುರಾರಿಯಲ್ಲಿ ನಿರುಕಿಕೊಂಡಿತು. ಹರಿಯ ಪದಕಮಲಗಳಲ್ಲಿ ಕಂಗಳು ಒಡೆವೆಚ್ಚವು. ಭಕ್ತಿ ನಿರ್ಭರನಾದ ವಿದುರನು ಗೊಂಬೆಯಂತೆ ಬೆರಗುಗೊಂಡು ಮೌನದಲ್ಲಿದ್ದನು.

ಪಾಲ್ಗಡಲೊಳಗೆ ಮಲಗುವ ವಿಷ್ಣು ವಿದುರನ ನಿಳಯದೊಳಗೆ ಒಕ್ಕುಡಿತೆ ಹಾಲಲಿ ಹಸಿವ ನೂಕಿದನು. ಲೋಕವೆಲ್ಲ ಅವನ ಕರುಣದ ಘನತೆಯನ್ನು ಕಂಡು ಬೆರಗುವಟ್ಟಿತು.

ಹರಿಯ ಪದಕಮಲಾಭಿಷೇಕದ
ವರಪಯೋಬಿಂದುಗಳು ಕೌರವ
ನರಮನೆಯನೊಳಕೊಂಬವೊಲ್ ಕಡಲಾಗಿ ಕೈಗೊಳಲು
ಅರರೆ ಮುರಹರನೊಡನೆ ಹಾಲಿನ
ಶರಧಿ ಮೇರೆಯನೊಡೆದುದಿಳೆಗ
ಚ್ಚರಿಯೆನುತ ಭೀಷ್ಮಾದಿಗಳು ಹೊಗಳಿದರು ಮುರಹರನ ॥

ಒಂದು ಕುಡಿತೆ ಹಾಲು ಇಡಿಯ ಬ್ರಹ್ಮಾಂಡವನ್ನೇ ಒಳಗೊಳ್ಳುವ ಹರಿಯ ಹೊಟ್ಟೆಯ ಯಾವ ಮೂಲೆಯಲ್ಲಿ ಇಳಿದಿರಬೇಕು! ಭಾವಶುದ್ಧಿಯ ಭಕುತಿ ಬೇಡುವ ದೇವನಿಗೆ ಈ ಒಕ್ಕುಡಿತೆ ಹಾಲು ಹಸಿವ ನೂಕಿತಂತೆ! ಅದರಲ್ಲಿಯೇ ಮಿಕ್ಕುಳಿದ ಒಂದೆರಡು ಹಾಲಹನಿಗಳು ಅವನ ಪದಕಮಲಾಭಿಷೇಕವ ಮಾಡಿ ಧರೆಗಿಳಿದವು. ಆ ಬಿಂದುಗಳೇ ಸಿಂಧುವಾಗಿ ಕೌರವನ ಅರಮನೆಯನ್ನು ಸುತ್ತಿದವು. ಅದನ್ನು ಕಂಡು ಮುರಹರನೊಡನೆ ಪಯೋಧಿಯೂ ಇಳೆಗೆ ಬಂದಿತೆಂದು ಭೀಷ್ಮಾದಿಗಳು ಹೊಗಳಿದುದು ಏನಾಶ್ಚರ್ಯವು!

ಕೌರವನ ಅರಮನೆಯ ರಾಜಾತಿಥ್ಯವನ್ನೂ ಕಡೆಗಣಿಸಿ ಭಕ್ತವಿದುರನ ಮನೆಗೆ ಬಂದು ಆತಿಥ್ಯವನ್ನು ಸ್ವೀಕರಿಸಿ ತನ್ನ ಭಕ್ತವಾತ್ಸಲ್ಯವನ್ನು ಪ್ರಕಟಿಸಿದನು. ವಿದುರನ ಶುದ್ಧ ಭಾವ ಭಕ್ತಿಗಳನ್ನು ಲೋಕಕ್ಕೆ ತೋರುವ ಹಂಬಲ ಅವನಿಗೆ. ಅದರೊಂದಿಗೆ ಕೌರವನ ಕೆರಳಿಸಿ ಅವನ ಬಲ ಉಡುಗಿಸುವ ಯೋಚನೆಯೂ ಸೇರಿದೆ. ತನ್ನ ಮನೆಗೆ ಊಟಕ್ಕೆ ಬರಲಿಲ್ಲವೆಂಬ ಅಸಮಾಧಾನವನ್ನು ಕೌರವನು ವಿದುರನನ್ನು ಆಡಿಕೊಂಡು ತೀರಿಸಿ

ಕೊಂಡನಷ್ಟೆ. ಆದರ ಫಲವಾಗಿ ವಿದುರನು 'ಕಡುಮುಳಿಸಿನಲಿ ಭೀಮ ನಿನ್ನಯ ತೊಡೆಗಳನು ಕಡಿವಾ ಸಮಯದೊಳು ತಡೆದು ನಿನ್ನನು ಕಾಯಬೇಕೆಂದು ಉಳುಹಿದೆನು ಧನುವ. ಕೆಡಿಸುಡಿಸಿ ಕೊಂಡು ಇನ್ನು ಕಾವೆನೆ?' ಎಂದು ಹಿಡಿದ ಬಿಲ್ಲನ್ನು ಮುರಿದು ಚೆಲ್ಲಿದನು. ಮಧುಸೂದನನು ಹರುಷದಿಂದ ನಕ್ಕನು.

ದುರ್ಯೋಧನನ ಅನ್ನದ ರಿಣಕ್ಕೆ ಒಳಗಾದ ವಿದುರ ಮೋಹಗೊಂಡು ಅವನನ್ನು ಕಾಯಬೇಕೆಂದು ಬಿಲ್ಲನ್ನು ಬಚ್ಚಿಟ್ಟಿದ್ದನು. ಅದು ಇಂತು ಮುರಿದುದು ಹರಿಯ ಸಂಕಲ್ಪದಿಂದಲೇ ಎಂಬುದನ್ನು ಲಕ್ಷಿಸಬೇಕು. ಭಕ್ತನಿಗೆ ಅರಿವಾಗದಂತೆ, ದ್ವೇಷಿಗಳಿಗೆ ತಿಳಿಯದಂತೆ ಭಂಗಿಸಿದ ಬಗೆ ಹರಿಗಲ್ಲದೆ ಇನ್ನಾರಿಗೆ ಸಾಧ್ಯ!

ಡಿಂಗರಿಗರೇ ಮಿಗಿಲು

ಕೆರಳಿದ ಕಲಿ ಭೀಷ್ಮನ ಅಂಬುಗಳು ಸುರರಿಪುವಿನ ಮಂಗಳಾನನ ಕಮಲದಲ್ಲಿ ನಟ್ಟವೆ. ಮುರಾರಿಗೆ ಘನ ರೋಷ ಉಕ್ಕಿದೆ.

ಕೆಂಡವಾಗಲಿ ಲೋಕ ದಿವಿಜರ
ಹೆಂಡಿರೋಲೆಯು ಕಳಿದುಹೋಗಲಿ
ದಿಂಡುಗೆಡೆಯಲಿ ಮೇರುಮೇದಿನಿ ನಿಲಲಿ ವಿತಳದಲಿ
ಗಂಡುಗೆಡಿಸಿದರಿಲ್ಲ ದಾನವ
ದಿಂಡೆಯರು ಹಲರೆನ್ನೊಡನೆ ಮಾ
ರ್ಕೊಂಡವರು ಮಾಮಾ ಪ್ರತಿಜ್ಞೆಯ ತೊಡಕು ಬೇಡ......||

ಎಂದು ಘನರೋಷ ತಾಮಸವ ತಾಳಿ, ರುದ್ರಾತ್ಮಕನು ತಾನೆಂಬುದನ್ನು ತೋರಿದನು. ಕಂಗಳು ಕೆಂದಾವರೆಯಂತೆ ಕೆಂಪಾದುವು. ರೋಷದ ಕಿಡಿ ಹಾರಿದುವು. 'ಸಲಹುವ ಅಯ್ಯನು ಮುಳಿದು ಲೋಕದ ಕೊಲೆಗೆಲಸಕೆ ಐಸಿದನೆ?' ಎಂದು ಅಮರರು ಎದೆಗೆಟ್ಟರು. 'ಜಗದಳಿವು ಜೋಡಿಸಿತು' ಎಂದು ಅಬುಜಭವ ನಡುಗಿದನು.

ತುಡುಕಿದನು ಚಕ್ರವನು ರಥದಿಂ
ಪೊಡವಿಯೊಳು ಧುಮ್ಮಿಕ್ಕಿದನು ಹ
ತ್ತಡವ ಹಾಯಿಕಿ ಹರಿದನು+ಒಡಬಿದ್ದವರನೊಡೆ ತುಳಿದು
ಸುಡುವೆನಹಿತಾನ್ವಯವ ಭೀಷ್ಮನ
ಕಡಿದು ಭೂತಗಣಕ್ಕೆ ಬೋನವ
ಬಡಿಸುವೆನು ನೋಡಿಲ್ಲಿ ಮೇಳವೆಯೆನುತ ಸೈವರಿದ ||

ಆಗ ಕಲಿಭೀಷ್ಮನು 'ಹರಿಮುಕುಂದ ಮುಕುಂದ ಲಕ್ಷ್ಮೀವರ ನೃಕೇಸರಿ' ಎಂದು ಚಾಪವ ಶರವ ಅವನಿಗೆ ಬಿಸುಟು ಮೆಯ್ಯಿಕ್ಕಿದನು. ಕರಯುಗವ ಮುಗಿದೆದ್ದು 'ಮುರಹರ ಸರಸಿಜಾಂಬಕ ರಾಮ ರಕ್ಷಿಸು. ತರಳನಲಿ ಗುಣ ದೋಷದ ಅರಕೆಯೆ ದೇವ ಹೇಳು' ಎಂದನು. 'ಇದಾವ ಉಚಿತವ ಮಾಡಿದಿರಿ ಮಹಿಮಾವಲಂಬವ ಮರೆದುದಕೆ ನಗೆ ಬಂದುದು' ಎಂದು ಭೀಷ್ಮನು ನಗೆಯಾಡಿದನು.

ರೋಮ ರೋಮದೊಳಖಿಲ ಭುವನ
ಸ್ತೋಮ ನಲಿದಾಡುವದು ಗಡ, ನಿ
ಸ್ಸೀಮತನ ಗಡ, ನಾವು ವೈರಿಗಳೆಂದು ಕೋಪಿಸುವ

ಈ ಮರುಳತನವೆತ್ತಲೀ ರಣ
ತಾಮಸಿಕೆ ತಾನೆತ್ತಣದು ರಘು
ರಾಮ ರಕ್ಷಿಸು ಬಯಲಿನಾಡಂಬರವಿದೇನೆಂದ ||

ಶ್ರೀಕೃಷ್ಣ ಭಕ್ತನಾದ ಗಾಂಗೇಯನು ಪರಮಾತ್ಮನ ಮಹತಿಯನ್ನು ಅರಿಯದವನೇ ? ದೇವ ದೇವನ ಕಪಟನಾಟಕ ಕಂಡು ಇಂತು ನುಡಿಯುತ್ತಾನೆ–

ಶತಪಿತಾಮಹರಡಗರೇ ನೀ
ಮತಿಮುರಿಯೆ, ಮೇಣ್ ಭ್ರೂವಿಲಾಸ
ಸ್ಥಿತಿಯೊಳೇನುತ್ಪತ್ತಿಯಾಗದೆ ಬ್ರಹ್ಮಕೋಟಿಗಳು
ಅತಿಶಯದ ಮಹಿಮಾಸ್ಪದನು, ನೀ
ನತಿಗಹನನೆಂಬಗ್ಗಳಿಕೆಗಿದು
ಕೃತಕವಲ್ಲಾ ದೇವ ಹೇಳೆನ್ನಾಣೆ ಹೇಳೆಂದ ||

ಶ್ರೀಕೃಷ್ಣನ ಭಕ್ತಪರಾಧೀನತೆಯನ್ನು, ಭಕ್ತವಾತ್ಸಲ್ಯವನ್ನು ಬಲ್ಲ ಭೀಷ್ಮನು ದೇವನಾಮದ ಜೋಡು ತನ್ನನ್ನು ಕಾಯುವದೆಂದು ಆತ್ಮ ವಿಶ್ವಾಸದಿಂದ ಹೀಗೆ ಹೇಳುತ್ತಾನೆ–

ದೇವ ನೀ ದಿಟ ಕೊಲುವಡೆಯು ನಾ
ಸಾವೆನೇ, ತಾನಾವನೆಂಬುದ
ದೇವರರಿಯಿರಲೈ, ವೃಥಾ ಸಂಭಿನ್ನರೋಷದಲಿ
ದೇವನಾಮದ ಜೋಡು ನಮ್ಮನು
ಕಾವುದೈ, ನೀ ಮುನಿದಡೆಯು ನಿಮ
ಗಾವು ಹೆದರೆವು, ನಾಮಧಾರಿಗಳತುಲ ಬಲರೆಂದ ||

ಭಕ್ತನ ಈ ನಿರ್ಭಯತೆ, ವಿಶುದ್ಧ ಭಕ್ತಿ ಶ್ರದ್ಧೆಗಳಿಗೆ ತಲೆದೂಗದವರಾರು ! ಭೀಷ್ಮನ ವೀರ ಭಕ್ತಿಯ ಈ ನುಡಿ ರೋಮಾಂಚನಗೊಳಿಸುತ್ತದೆ, ಕೇಳಿರಿ–

ಕಳುಹಿ ಕಳಿದವು ಖಾತಿಯುನು, ನೀ
ನುಳುಹಿಕೊಂಬುದು ತೇಜವನು, ದಿಟ
ಕೊಲುವ ಮನವೇ, ಬಿಸುಡು ಚಕ್ರವನೆನ್ನ ಕಾಯದಲಿ
ಅಳುಕಿ ಕೂದಲು ಹರಿದುದಾದರೆ
ಬಳಿಕ ನಾ ಡಿಂಗರಿಗನಲ್ಲೀ
ಕಳಕಳಕೆ ನಾನಂಜುವವನೇ ದೇವ ಮರಳೆಂದ ॥

ಗಾಂಗೇಯುನ ಈ ದಾರ್ಢ್ಯ, ಧಾರ್ಷ್ಟ್ಯಗಳು ಇನ್ನಾರಿಗೆ ಬರ ಬಲ್ಲವು? ದೇವಗಿಂತಲೂ ಭಕುತನೇ ಮಿಗಿಲೆಂಬುದನ್ನು ಸ್ಪಷ್ಟ ವಾಗಿ ಸಾರುತ್ತಾನೆ–

ಭಂಗವಲ್ಲಿದು ನಿನ್ನ ಘನತೆಗೆ
ಡಿಂಗರಿಗರೇ ಮಿಗಿಲು, ನಿನಗೆಯು
ಡಿಂಗರಿಗರೇ ಬಲ್ಲಿದರು, ದಾಕ್ಷಿಣ್ಯವೇನಿದಕೆ
ಮಂಗಳಾತ್ಮಕ ಕೇಳು ನಿನ್ನಯ
ಹಂಗನೊಲ್ಲೆನು ಮುಕುತಿ ಪಥದೊಳ
ಭಂಗಪೆಂಡೆಯುದಾಳಲ್ಮೈ ನಿಮ್ಮಡಿಯ ಸಿರಿನಾಮ ॥

ಭೀಷ್ಮನಿಂತು ಉದ್ಘೋಷಿಸಿದಾಗ ಭಕ್ತರ ತನು ಪುಳಕಿತವಾಗು ತ್ತದೆ. ವೀರಭೀಷ್ಮನ ನಿಚ್ಚಟದ ಭಕ್ತಿಯನು ನೆನೆನೆನೆದು ಹರಿ ಶಿರವ ತೂಗಾಡಿದನು. ನಚ್ಚಿನಾಳಿನ ಬಿನ್ನಹಕೆ ಮೆಚ್ಚಿ ಮನದಲಿ ನಾಚಿ ಚಕ್ರವ ಮುಚ್ಚಿದನು; ಕಿರೀಟಿಯು ರಥದ ಹೊರೆಗೆ ಮುರಿದನು.

ಶ್ರೀಕೃಷ್ಣನು ಚಕ್ರವನ್ನು ಹಿಡಿದಾಗ ದಳ್ಳುರಿಯ ಸಸಿ ಯಂತಾಗಿದ್ದ ಅರ್ಜುನನು ಈಗಲೂ ನಡುಗುತ್ತಲಿದ್ದನು. ಕಾರಣ ಹರಿಯು ಅರ್ಜುನ ದೇವನನು ತೆಗೆದು ಅಡಿಗಡಿಗೆ ತಕ್ಕೈಸಿ

ಭೀತಿಯ ಬಿಡಿಸಿ, ವಾಘೆಯ ಕೊಂಡು, ಎಡಬಲಕೆ ತುರಗವನು ತಿರುಹಿದನು. ಮುನ್ನಿನ ಕೋಪವೆಲ್ಲಿ, ಈಗಿನ ವಾತ್ಸಲ್ಯಮುಮತೆಯೆಲ್ಲಿ! ಎಲ್ಲವೂ ಅವನ ಲೀಲೆ !

ಪಂಪಕವಿಯು ಇದೇ ಸನ್ನಿವೇಶವನ್ನು ಚಿತ್ರಿಸುವಲ್ಲಿ ಭೀಷ್ಮನ ಪರಾಕ್ರಮದ ಹಿರಿಮೆಯನ್ನು ಕಾಣಿಸುತ್ತಾನೆ. ಕೃಷ್ಣನು ತನ್ನ ಸೋಲನ್ನು ಒಪ್ಪಿಕೊಂಡಂತಾಗಿದೆ ಒಂದು ದೃಷ್ಟಿಯಲ್ಲಿ. ಭೀಷ್ಮನ ಭಕ್ತಿಭಾವದ ಪ್ರಕಟಣೆಗೆ ಅಲ್ಲಿ ಅವಕಾಶವೇ ಇಲ್ಲ. ಹಾಗು ಅದು ಕವಿಯ ಉದ್ದೇಶವೂ ಅಲ್ಲ. ಭಕ್ತರನ್ನು ಎತ್ತಿಹಿಡಿದು ಅವರ ಪ್ರತಿಜ್ಞೆಯನ್ನು ಪೂರ್ಣಮಾಡುವ ತನ್ನ ಸೋಲನ್ನೂ ಲೆಕ್ಕಿಸದ ಭಕ್ತಪರಾಧೀನತೆ, ವಾತ್ಸಲ್ಯಗಳನ್ನು ವರ್ಣಿಸುವ ಸುಸಂಧಿ ಇದರಿಂದಾಗಿ ಕಳೆದುಹೋಗಿದೆ. ಈ ಸಂದರ್ಭವನ್ನು ಎತ್ತಿಕೊಂಡು ಕುಮಾರವ್ಯಾಸ ಕವಿ ತನ್ನ ಭಗವದ್ಭಕ್ತಿಯನ್ನು ಪ್ರಕಟಿಸುತ್ತಾನೆ. ಭಕ್ತಿರಸಪೂರ್ಣವಾದ ಇಂತಹ ಸನ್ನಿವೇಶಗಳನ್ನು ವರ್ಣಿಸುವಲ್ಲಿ ಕವಿಗೆ ಎಲ್ಲಿಲ್ಲದ ಉತ್ಸಾಹ, ಆವೇಶವು. ಶ್ರೀಕೃಷ್ಣನು ಚಕ್ರವನ್ನೆತ್ತಿ ತನ್ನ ಪ್ರತಿಜ್ಞೆಯನ್ನು ತಾನೇ ಭಂಗಗೊಳಿಸುವದು ಭಕ್ತನಿಗೆ ಅಚ್ಚರಿಯನ್ನುಂಟುಮಾಡದು. ಅದು ಭಗವಂತನ ಸೋಲಲ್ಲ; ಭಕ್ತನ ಗೆಲವು. ಅಂತೆಯೆ 'ಭಂಗವಲ್ಲಿದು ನಿನ್ನ ಘನತೆಗೆ' 'ಡಿಂಗರಿಗರೇ ಮಿಗಿಲು' ಎಂದು ಸಾರುತ್ತಾನೆ ಕವಿ ಭೀಷ್ಮರ ಮೂಲಕ. ದೇವನಿಗೆ ಸೋಲುಗೆಲವುಗಳೆಲ್ಲಿ? ಭಕ್ತನ ಗೆಲವಿನಲ್ಲಿಯೇ ಅವನಿಗೆ ಸಂತೋಷ. ಭಕ್ತನ ಪ್ರತಿಜ್ಞೆ ಪೂರ್ಣಮಾಡದಿದ್ದರೆ ಆ ದೋಷ,

ಅಪವಾದ ತನಗೇ ಅಲ್ಲವೆ? ಕಾರಣ ಈ ಸೋತಂತೆ ತೋರುವ ನಾಟಕ. ಸಾಮಾನ್ಯರಿಗೆ ದೇವನು ಸೋತನು, ಎಂಬ ಅಜ್ಞಾನ ಮಾಯೆ. ಜ್ಞಾನಿಗಳಿಗೆ ಭಕ್ತರಿಗೆ ಇದೆಲ್ಲವು ಪರಮಾತ್ಮನ ವಿನೋದಲೀಲೆ. 'ಪದುಮನಾಭನ ಮಹಿಮೆ'ಯನ್ನು ಹೊಗಳ ಹೊರಟ ಕವಿ ಕುಮಾರವ್ಯಾಸನಿಗೆ ಶ್ರೀಕೃಷ್ಣಮಹಿಮೆಯನ್ನು ಎಷ್ಟೆಷ್ಟು ಸಂದರ್ಭ ಸನ್ನಿವೇಶಗಳಲ್ಲಿ ಬಣ್ಣಿಸಿದರೂ ಮನಸ್ಸಿಗೆ ತೃಪ್ತಿಯಿಲ್ಲ. 'ಡಿಂಗರಿಗರೇ ಮಿಗಿಲು' ಎಂಬ ಭಾಗವತ ದೃಷ್ಟಿ ಈ ಸನ್ನಿವೇಶದಲ್ಲಿ ಬಹು ಹೃದಯಂಗಮವಾಗಿ ಮೂಡಿಬಂದಿದೆ.

೪. ಭಗವತ್ಕಾರುಣ್ಯ ದೃಷ್ಟಿ

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥
—ಭಗವದ್ಗೀತಾ

ಲೋಕದಲ್ಲಿ ಧರ್ಮಗ್ಲಾನಿಯಾದಾಗಲೆಲ್ಲ ತಾನು ಅವತರಿಸುತ್ತೇನೆಂದು ಭಗವಂತನು ಹೇಳಿರುವನಷ್ಟೇ. ಕೃತ, ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ಶ್ರೀವಿಷ್ಣುವು ಹತ್ತು ಅವತಾರಗಳನ್ನು ಮಾಡುತ್ತಾನೆಂಬುದು ಪುರಾಣ ಪ್ರಸಿದ್ಧವು. ಈ ಅವತಾರಗಳ ಮೂಲವನ್ನು ವೇದಗಳಲ್ಲಿಯೂ ಗುರುತಿಸಲಾಗುತ್ತದೆ. ಭಾಗವತರು ದಶಾವತಾರಗಳಲ್ಲಿ ಶ್ರೀಹರಿಯು ಗೈದ ಲೀಲೆಗಳನ್ನು ಭಕ್ತಿಭಾವದಿಂದ ವರ್ಣಿಸುತ್ತಾರೆ. ದಶಾವತಾರಗಳನ್ನೆತ್ತಿ ದುಷ್ಟಸಂಹಾರ ಶಿಷ್ಟರಕ್ಷಣೆಗೈದು ಲೋಕವನ್ನುದ್ಧರಿಸುವ ಪರಮಾತ್ಮನ ಬಗೆಯನ್ನು, ಲೀಲೆಯನ್ನು, ನಾಮ ಮಹತಿಯನ್ನು ಹರ್ಷದುಂಬಿ ಹೊಗಳುವದು ಭಾಗವತ ಧರ್ಮದ ಮುಖ್ಯ ಲಕ್ಷಣಗಳಲ್ಲಿ ಒಂದು. ದುಷ್ಟರ ಸಂಹಾರಕ್ಕಿಂತಲೂ ಶಿಷ್ಟರನ್ನು ಸಂರಕ್ಷಿಸಿದ ಕಥೆಗಳನ್ನು ಬಗೆಬಗೆಯಿಂದ ಹೊಗಳಿದುದು ಕಂಡುಬರುತ್ತದೆ. ಪುರಂದರದಾಸಾದಿಗಳು ಹರಿಯ ಅವತಾರಗಳನ್ನು

ತಮ್ಮ ಕೀರ್ತನೆಗಳಲ್ಲಿ ವೈವಿಧ್ಯಪೂರ್ಣವಾಗಿ ಬಣ್ಣಿಸಿದ್ದಾರೆ. ಹಾಗು ಪ್ರಹ್ಲಾದ, ಧ್ರುವ, ಬಲಿಚಕ್ರವರ್ತಿ, ದ್ರೌಪದಿ, ಅಂಬರೀಷ, ಅಜಾಮಿಳ, ಗಜೇಂದ್ರ ಮುಂತಾದ ಮಹಾಭಕ್ತರನ್ನು ಉದ್ಧರಿಸಿದ ಪರಮಾತ್ಮನ ಅಪಾರ ಮಹಿಮೆಯನ್ನು ಬಿಡದೆ ಕೊಂಡಾಡಿದ್ದಾರೆ. ಭಾಗವತ ಶ್ರೇಷ್ಠನಾದ ಕವಿ ಕುಮಾರ ವ್ಯಾಸನು ಸಹಿತ ತನ್ನ ಕಾವ್ಯದಲ್ಲಿ ಶ್ರೀವಿಷ್ಣುವಿನ ಅವತಾರಗಳನ್ನು, ಅವನು ಬೇರೆ ಬೇರೆ ಭಕ್ತರನ್ನು ಉದ್ಧರಿಸಿದುದನ್ನು ಸನ್ನಿವೇಶ ಸಂದರ್ಭಗಳಿಗೆ ಉಚಿತವಾಗಿ ಪ್ರಸ್ತಾಪಿಸಿ ಬಾಯಿ ತುಂಬ ಬಣ್ಣಿಸಿದ್ದಾನೆ. ಸಂಗ್ರಹರೂಪವಾಗಿ ಅವನ್ನು ಇಲ್ಲಿ ಪ್ರಸ್ತಾಪಿಸಿದರೆ ತಪ್ಪಾಗಲಾರದು.

ಮತ್ಸ್ಯ

ಈತ ಕಾಣಿರೆ ಘನ ಚರಾಚರ
ಚೇತನತ್ವದಿ ವಿಹಿತ ಬೀಜ
ವ್ರಾತವನು ತುಂಬಿದನು ಪಡಗಿನೊಳೌಕಿ ಬಾಲ್ಯದಲಿ
ಆತ ತಮನೆಂಬಸುರನನು ಕರ
ಘಾತಿಯಿಂದವೆ ಕೆಡಹಿ ವೇದವ
ನೀತ ತಂದನು ಮತ್ಸ್ಯರೂಪಿನೊಳು.........॥

ಕೂರ್ಮ

.........ಕೂರ್ಮವೇಷವ ಧರಿಸಿ ಮೇದಿನಿಯ ।
ಸಾಲ ಹೆಡೆಯಲಿ ಹೊತ್ತ ಪನ್ನಗ
ಪಾಲಕನನಾ ಮಂದರದ ಕಡ
ಗೋಲನಾಂತ ಮಹಾತ್ಮನೀತನ ಅರಿವರಾರೆಂದ ॥

ವರಾಹ

ಇವನ ಪಾಡೇ ಮುನ್ನ ಕೃತಯುಗ
ದವರೊಳಧಿಕ ಹಿರಣ್ಯಲೋಚನ
ನವನಿಯನು ಕೊಂಡೋಡಿ ಹೊಕ್ಕನು ಘನರಸಾತಳವ
ಅವನ ಬೆಂಬತ್ತಿದನು ಯಜ್ಞ
ಪ್ರವರ ದೇಹನು ವೇದಮಯ ನಿ
ರ್ಭವ ವಿಮೋಹನ ಘನವರಾಹನೆ ಕೃಷ್ಣ ತಾನೆಂದ ||
ತೂಳಿದನು ದಂಡೆಯಲಿ ದೈತ್ಯನ
ಸೀಳಿದನು, ದಿಕ್ಕರಿ ಫಣೀಂದ್ರರ
ಮೇಲೆ ಧರಣಿಯ ನಿಲಿಸಿದನು ಸಂತವಿಸಿದನು ಜಗವ |

ನೃಸಿಂಹ

ಆ ಹಿರಣ್ಯಾಕ್ಷನ ಸಹೋದರ
ನೀ ಹರಿಯನವಗಡಿಸಿ ದೈವ
ದ್ರೋಹಿ ಬಹುವಿಧ ವ್ಯಥೆಗಳಲಿ ಬೇಸರಿಸಿದನು
ಮಗನ |

ಕಾದುದೀತನ ನಾಮವಾ ಪ್ರ
ಹ್ಲಾದನಾಸರು ಬೇಸರನು, ಬಳಿ
ಕೀ ದಯಾಂಬುಧಿ ದನುಜಪತಿ ದಿಟ್ಟಿಸಿದ ಕಂಬದಲಿ
ಆದುದಾವಿರ್ಭಾವ ಸಿಡಿಲಿನ
ಸೋದರದ ಕಣ್ಣುಗಳ ಭಾಳದ
ಬೀದಿಗಿಚ್ಚಿನ ರೌದ್ರದಲಿ ನರಸಿಂಹ ರೂಪಾಗಿ ||
ಉಗುರೊಳಸುರನ ಕರುಳ ದಂಡೆಯ
ನುಗಿದು ಕೊರಳಲಿ ಹಾಯ್ಕಿ ದೈತ್ಯನ
ಮಗನ ಪತಿಕರಿಸಿದನು...........

ವಾಮನ

ತ್ರೇತೆಯಲಿ ಬಲಿರಾಜ್ಯ ಭುವನ
ಖ್ಯಾತವಾಯಿತ್ತು ತದಶ್ವಮೇಧದೊ
ಳೀತ ವಾಮನನಾಗಿ ಯಾಚಿಸಿದನು ಪದತ್ರಯವ
ಭೂತಳವನಲ್ಲಿಂದ ಬಳಿಕ
ಪ್ರೀತಿಯಲಿ ಕಮಲಜ ಕಟಾಹೋ
ದ್ಭೂತ ಚರಣದೊಳಳೆಯಲಾದುದು ಧರಣಿ
ಪದಯುಗಕೆ ||

ನೆರೆಯದೀ ನೆಲ ನೆಗಹಿದಂಘ್ರಿಗೆ
ಮುರಿದುದಬುಜ ಭವಾಂಡ ಖರ್ಪರ
ದೊರತೆ ಬಹಿರಾವರಣ ಜಲಗಂಗಾಭಿಧಾನದಲಿ |

ಪರಶುರಾಮ

ಮಿಡುಕಿದರೆ ರಾವಣನ ಸೆರೆಯಲಿ
ಕೆಡಹಿದನಲಾ ಕಾರ್ತವೀರ್ಯನ
ಕಡುಹನಾನುವ ದಿಟ್ಟರುಂಟೇ ದೇವ ದೈತ್ಯರಲಿ
ತೊಡಕಿದರೆ ಬಳಿಕಾ ನೃಪನ ತೋ
ಳಡವಿಗಡಿದು ಮಹೀಶವಂಶವ
ತಡೆಗಡಿದನೀ ಕೊಡಲಿಕಾರನ ತೋಟಿ ಬೇಡೆಂದ ||

ರಾಮ

ಖರನ ತ್ರಿಶಿರನ ದೂಷಣಾದ್ಯರ
ಶಿರವ ಚೆಂಡಾಡಿದನು ಘನ ಸಾ
ಗರವ ಕಟ್ಟಿದ ಕಟ್ಟೆಯಿದೆಲಾ ಕಾಣದೇ ಲೋಕ

ಹರಗಿರಿಯನೊಡೆಯೆತ್ತಿದುಬ್ಬಟೆ
ಯರಸಲಾ ದಶವದನನಾತನ
ಶಿರದಃಪಾರವನಿಟ್ಟು ದಣಿಸಲೆ ದೆಸೆಯ ದೇವಿಯರ॥

ಕೃಷ್ಣ

ಸೇದಿದನು ಪೂತನಿಯಸುವನವ
ಳಾದರಿಸಿ ಮೊಲೆವಾಲನೂಡಿಸೆ
ಪಾದತಳ ಸೋಂಕಿನಲಿ ತೊಟ್ಟಲ ಬಂಡಿ ನುಗ್ಗಾಯ್ತು
ಸೇದಿ ಕಟ್ಟದೊರಳ ನೆಳೆದರೆ
ಬೀದಿಯಲಿ ಮರ ಮುರಿದುದೀ ಕರು
ಗಾದವನ ಕೈಯಿಂದ ಮಡಿದುದು ಕಂಸ ಪರಿವಾರ ॥

ಕುಮಾರವ್ಯಾಸನು ಇಂತು ಅಗ್ರಪೂಜಾ ಸಂದರ್ಭದಲ್ಲಿ ಭೀಷ್ಮಾಚಾರ್ಯರ ಮೂಲಕ ಮತ್ಸ್ಯಾವತಾರದಿಂದ ಕೃಷ್ಣಾವತಾರ ಪೂರ್ಣವಾಗಿ ವರ್ಣಿಸಿದ್ದಾನೆ. ಕಲ್ಕಿ, ಬುದ್ಧಾವತಾರಗಳು ಇಲ್ಲಿ ವರ್ಣಿತವಾಗಿಲ್ಲ. ಕಾಲದ ಔಚಿತ್ಯ ದೃಷ್ಟಿಯಿಂದ ಕವಿಯು ಬಣ್ಣಿಸಿಲ್ಲ. ಪ್ರಹ್ಲಾದ, ಅಂಬರೀಷ, ಅಜಾಮಿಳ, ಗಜೇಂದ್ರ, ದ್ರೌಪದಿ ಮುಂತಾದ ಭಕ್ತರನ್ನು ರಕ್ಷಿಸಿದ ಹರಿಯ ಮಹಿಮೆಯನ್ನು ಕೂಡ ಕುಮಾರವ್ಯಾಸನು ಅಲ್ಲಲ್ಲಿ ಹೊಗಳಿದ್ದಾನೆ, ಇಲ್ಲವೆ ಪ್ರಸ್ತಾಪಿಸಿದ್ದಾನೆ.

ಭಕ್ತರಕ್ಷಕ

ಕಾಯಿದೈ ಪ್ರಹ್ಲಾದ, ಮಾರ್ಕಂ
ಡೇಯ, ವನಗಜ, ವಂಬರೀಷನ
ಕಾಯಿದೈ ಕಾರುಣ್ಯದಲಿ ಪಾತಕಿಯಜಾಮಿಳನ

ಅಂಬರೀಷೋದ್ಧಾರಕ ಅಚ್ಯುತ

ಮುನ್ನವೇ ಮುನಿದಂಬರೀಷನ
ಬೆನ್ನ ಹತ್ತಲು ಹರನ ನೇತ್ರದ

ವಹ್ನಿಯೊಳಗುದಯಿಸಿದ ಕೆಂಗಿಡಿ ಸುಡಲು ಕಂಗೆಡುತ
ಉನ್ನತೋನ್ನತ ಕೃಷ್ಣ ರಕ್ಷಿಸು
ಪನ್ನಗಾಸನ ಹರಿಯೆ ಕೃಷ್ಣ ರಕ್ಷಿಸು
ಅನ್ಯಗತಿಯಾರೆನುತ ಹಲುಬಿದನು ಭೂಪಾಲ ||

ಬಳಿಕ ನಿನ್ನಯ ವರಸುದರ್ಶನ
ಸುಳಿವುದೋರಲು ಕೋಟಿಸೂರ್ಯರ
ಬೆಳಗು ಬೀರಲು ಹೊತ್ತಿವುರಿವುರಿ ಲೋಕವುೂರರಲಿ
ಬಲು ಬಿಸಿಲು ಬಾಯ್ದಾಂತ ಚಂದ್ರಿಕೆ
ವೆಳಗೆನಲು ಘನರೋಷವಹ್ನಿಯು
ಬೆಳಗು ಬೀತುದು, ಚಕಿತ ಚಂದ್ರವುನಾದ
ದೂರ್ವಾಸ ||

ಅಗಿದು ಬೆಂಬತ್ತಿದೊಡೆ ಮುನಿ ಮೂ
ಜಗವನೆಲ್ಲವ ತೊಳಲಿ ಭಕುತಿಯು
ಬಿಗುಹಿನಲಿ ಮೈಯಿಕ್ಕಿ ಸುತಿ ಸಾರೂಪ್ಯಮಾನದಲಿ
ಹೊಗಳಿದಡೆ ಹಿಂಗಿದವಲಾ ಸುರ
ರುಗಳುಘೇಯೆನಲಂಬರೀಷನ
ಬೆಗಡ ಬಿಡಿಸಿದ ಕೃಷ್ಣ ಮೈದೋರೆಂದಳಿಂದು ಮುಖಿ ||

ಅಜಾಮಿಳೋದ್ಧಾರಕ

ಮಗನ ಕರೆದರೆ ಯಮನ ದೂತರ
ತಗುಳುವಂದು ಸಮೀಪವರ್ತಿಯೆ?
...................................|

ಕುಂಜರನ ಸಲುಹಿದ ದೇವ

ಕಂಜಸಂಭವ ಪಿತನು ಬಂದನು
ನಂಜಿನಲಿ ಪವಡಿಸುವ ಬಂದನು
ಕುಂಜರನ ಮೊರೆಗೇಳಿ ಸಲುಹಿದ ದೇವನಿದೆ ಬಂದ!

ದ್ರೌಪದಿಯ ಉಳುಹಿದ ದೈವ

ಹಿಂದೆ ಸೆಳೆ ಸೀರೆಯಲಕಟ ಗೋ
ವಿಂದ ರಕ್ಷಿಸನಾಥ ನಾಥ ಮು
ಕುಂದ ಕಾಯ್ಕೈ ಕೃಷ್ಣ ರಕ್ಷಿಸು ಕರುಣಿಸಸುರಾರಿ
ಇಂದಿರಾಪತಿಯೇ ಯಶೋದಾ
ನಂದನನೆ ಕಾರುಣ್ಯನಿಧಿ ಸಲ
ಹೆಂದರುಳುಹಿದ ದೈವ ನೀ ಮೈದೋರಿದೈ ತನಗೆ ॥

ಭಕ್ತ ಭೃತ್ಯ

ಎನಲು ನಗುತೆತ್ತಿದನು ಸಾರಥಿ
ತನವ ಕೈಕೊಂಡನು ಕೃಪಾಳುವಿ
ನನುನಯುವ ನಾನೆತ್ತ ಬಲ್ಲೆನು , ಭೃತ್ಯವರ್ಗದಲಿ
ತನಗಹಂಕೃತಿಯಿಲ್ಲ ವೈರೋ
ಚನಿಯ ಪಡಿಹಾರಿಕೆ, ಕಿರೀಟಿಯ
ಮನೆಯ ಬಂಡಿಯ ಬೋವನಾದನು ವೀರನಾರಯಣ॥

ಹರಿನಾಮ ಮಹಿಮೆ

ಭವದುರಿತ ಹರವಕಟ ಹರಿನಾ
ಮವನು ನೆನೆವರು ಕಾಲಚಕ್ರದ
ಜವನ ಬೇಗೆಯ ಜುಣುಗಿ ಜಾರುವರಖಿಳ ಮಾನವರು
ಕವಿ ಕುಮಾರವ್ಯಾಸ ಸೂಕ್ತದ
ಸವೆಯುದಮೃತವನೊಲಿದೊಲಿದು ಸು
ಶ್ರವಣದಲಿ ಕುಡಿಕುಡಿದು ಪದವಿಯ ಪಡೆವುದೀ
ಲೋಕ ॥

ಕೊನೆಯದಾಗಿ ಭಾಗವತೋತ್ತಮನಾದ ಕವಿ ಕುಮಾರ ವ್ಯಾಸನು ಗೈದ ಶ್ರೀಹರಿಯ ಸ್ತುತಿಯೊಂದಿಗೆ ಈ ಕೃತಿಗೆ ಮಂಗಳ ಪಾಡುತ್ತೇನೆ.

ದೇವ ಬಂದನು ತನ್ನ ನೆನೆವರ
ಕಾವ ಬಂದನು ದೈತ್ಯಕುಲ ವನ
ದಾವ ಬಂದನು ಭಾಗವತ ಜನ ಲೋಲುಪನು ಬಂದ
ಭಾವಿಸುವಡಘಹಾರಿ ಬಂದನು
ಓವಿ ಬಂದರೆ ತನ್ನ ಬೀರುವ
ದೇವ ಬಂದನು ವೀರನರಯಣ ಬಂದನರಮನೆಗೆ ||

ಅರಸ ಬಂದನು ಭಾಗವತಜನ
ಪರುಷ ಬಂದನು ಭಕ್ತವತ್ಸಲ
ಕರುಣಿ ಬಂದನು ತನ್ನ ನೆನೆದರೆ ಪರಮ ಪದವೀವ
ಪರಮಪುರುಷೋತ್ತಮನು ಬಂದನು
ದುರಿತ ವರ್ಗ ವಿಭಾಡ ಬಂದನು
ಸುರರ ಸಲಹುವ ದೇವ ಬಂದನು ನೃಪತಿಯರಮನೆಗೆ||

ಕ್ಷೀರವಾರಿಧಿಶಯನ ಬಂದನು
ವಾರಿಜೋದರ ಕೃಷ್ಣ ಬಂದನು
ಧಾರುಣಿಯ ಹೊರೆಯಿಳಿಸಲೋಸುಗ
ಮನುಜವೇಷದಲಿ
ಭೂರಿದನುಜರನೊರೆಸಿ ಕೌರವ
ವಾರಿಧಿಯ ಮುಕ್ಕಳಿಸಲೋಸುಗ
ಧೀರನೈತರುತಿರ್ದನಂಧನೃಪಾಲನರಮನೆಗೆ

———

ಉಪನ್ಯಾಸ ಗ್ರಂಥಮಾಲೆ

ಇತ್ತೀಚಿನ ಪ್ರಕಟನೆಗಳು

ವಿಜಯನಗರ ಕಾಲದ ಧಾರ್ಮಿಕ ಜೀವನ
—ಸದ್ಯೋಜಾತ ಸ್ವಾಮೀಜಿ

ಡಾ॥ ಖೊರಾನಾ ಅವರ ಸಂಶೋಧನೆಗಳು
—ಎಚ್. ಕೆ. ಮಲ್ಲಿಕಾರ್ಜುನಪ್ಪ

ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ
—ಎಲ್. ಜಿ. ಜೋಶಿ

ಕಾರ್ಮಿಕ ಮತ್ತು ಯೋಜನೆ
—ಟಿ. ಕೆ. ಮೇಟಿ

ಭಾರತೀಯ ಹಬ್ಬಗಳು
—ಸಿ. ವ್ಹಿ. ಕೆರಿಮನಿ

ಕುಷ್ಠರೋಗ ನಿವಾರಣೆ
—ಡಾ॥ ಎಸ್. ಜೆ. ನಾಗಲೋಟಿಮಠ

ಶ್ರವಣಾತೀತ ಧ್ವನಿ
—ಪ್ರೊ॥ ಡಿ. ಆರ್. ಬಳೂರಗಿ

ಸಿಮೆಂಟ್ ಕಾಂಕ್ರೀಟ್
—ಪ್ರೊ॥ ಬಸವರಾಜ ಪುರಾಣಿಕ

ಜನಪದ ಕಾವ್ಯ
—ಗಿರಡ್ಡಿ ಗೋವಿಂದರಾಜ

ಜಂತುರೋಗಗಳು
—ಡಾ॥ ಸಿ. ಎಸ್. ಶಂಕರ

ಸಾವಿತ್ರಿ
—ಪ್ರಲ್ಹಾದ ನರೇಗಲ್ಲ

ಧರ್ಮ ಸಂಸ್ಕೃತಿ ಮತ್ತು ಸಮಾಜ
—ಎನ್. ಕೆ. ಕಡೆತೋಟದ

ನೈತಿಕಶಿಕ್ಷಣ
—ಶಾಂತಯ್ಯ ಕೆಂಪಯ್ಯಮಠ

ಬಸವಣ್ಣನವರು ಕಟ್ಟಬಯಸಿದ ಸಮಾಜ
—ಸಂಗಣ್ಣ ಕುಪ್ಪಸ್ತ

ವ್ಯಾಸಂಗವಿಸ್ತರಣ ಮತ್ತು ಪ್ರಕಟನವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩